ಶ್ರೀ ಹೆಚ್.ಡಿ. ರೇವಣ್ಣ: ಅದಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ. ಜಮೀನು ಬಿಡಬೇಕಾದರೆ ಕೋರ್ಟ್‌ಗೆ ಹೋಗುತ್ತಾರೆ, ಅಂಥವಿಲ್ಲದಿದ್ದ ಕಡೆ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಎಸ್.ಪಾಟೀಲ್: ನೀವು ಹೇಳುವುದನ್ನೆಲ್ಲಾ ನೋಡಿದರೆ ಇದನ್ನು ಮಾಡಲು ಎಷ್ಟು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ?

ಶ್ರೀ ಹೆಚ್.ಡಿ.ರೇವಣ್ಣ: ಸುಮಾರು ಒಂದೂವರೆ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್: ಇದೊಂದೆ ಭಾಗದಲ್ಲಿ ಅಲ್ಲ. ಇಡೀ ರಾಜ್ಯದಲ್ಲಿ ವಿದ್ಯುತ್‌ಗೆ ತೊಂದರೆ ಇದೆ. ಇದು ಹಿಂದುಳಿದ ತಾಲ್ಲೂಕು. ಇದನ್ನು ಯಾವಾಗ ಮಾಡುತ್ತೀರಿ ಎಂದು ತಾವು ನಿಖರವಾಗಿ ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ: System improvementಗೆ ಸಾಕಷ್ಟು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್: (ಕಾನೂನು, ಸಂಸದೀಯ ಮತ್ತು ಗೃಹ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೇ, ದಿನಾಂಕ: 12.02.2007 ರಂದು 10ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು, ತಡೆಹಿಡಿಯಲಾದ 2 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 99 ಪ್ರಶ್ನೆಗಳ ಪೈಕಿ 81 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಮತ್ತು ದಿನಾಂಕ: 13.02..2007 ರಂದು 11 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 156 ಪ್ರಶ್ನೆಗಳ ಪೈಕಿ 100 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ–ಅ)

2. ಶೂನ್ಯ ವೇಳೆ:

ಅ) ವಿಷಯ: ಕಾವೇರಿ ನ್ಯಾಯಮಂಡಳಿ ತೀರ್ಪಿನ ಬಗ್ಗೆ.

ಶ್ರೀ ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಿನ್ನೆ ಕರ್ನಾಟಕದಲ್ಲಿ ವಾಟಾಳ್ ನಾಗರಾಜ್‌ರವರು ಮತ್ತು ಇತರ ಜನರು ಕೊಟ್ಟ ಬಂದ್‌ಗೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ನಾವು ಕೂಡ Business Advisory Committee ಯಲ್ಲಿ ಇವತ್ತು ಸಭೆ ಆಗಬಾರದು

ಎನ್ನುವ ರೀತಿಯಲ್ಲಿ ಚರ್ಚೆಯನ್ನು ಮಾಡಿದ್ದೇವೆ. ಮತ್ತೆ ನಮ್ಮ ಶ್ರೀರಾಮರೆಡ್ಡಿಯವರು ಹೇಳಿದರು, ಆಗಬೇಕೆಂದು. ನಾನು ಗೃಹ ಸಚಿವರಿಗೆ ಮುಂಜಾನೆ phone ಮಾಡಿದ್ದೆ. ನಾವು ಬರುವುದು ಹೇಗೆ? Drivers ಬಂದಿಲ್ಲ, ಬರುವುದಕ್ಕಾಗುವುದಿಲ್ಲ, ಎಲ್ಲಾ ಹೇಳಿದ್ದೇವೆ. ಮತ್ತು ತಮ್ಮ ಜೊತೆಗೂ ಕೂಡ ಮಾತನಾಡಿದ್ದೇವೆ. ಬಂದ್‌ಗೆ call ಕೊಟ್ಟ ಮೇಲೆ ಕರ್ನಾಟಕ ರಾಜ್ಯದಲ್ಲಿರುವ ಪರಿಸ್ಥಿತಿ ಏನಿದೆ, ಜನಾಭಿಪ್ರಾಯ ಏನಿದೆ, ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾರದೇ ತಾವು ಸದನಕ್ಕೆ ಬಂದಿರಿ, ಮತ್ತು ಸದನದಲ್ಲಿ ಕೂಡ ನಮ್ಮ ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು ಕೂಡ ಸಭಾತ್ಯಾಗವನ್ನು ಮಾಡಿದರು. ಕೊನೆಗೆ ತಾವು ಇವತ್ತು ಸದನವನ್ನು ಕರೆದಿದ್ದೀರಿ. ಇವತ್ತು ಕಾವೇರಿ ತೀರ್ಪು ಬಂದಮೇಲೆ ಒಟ್ಟಾರೆ ಕಾಂಗ್ರೆಸ್ ಪಕ್ಷ ಹಾಗೂ ಎಲ್ಲಾ ಪಕ್ಷಗಳೂ ಕೂಡ ಇದಕ್ಕೆ ನಾವು ಸಮರ್ಥನೆ ಮಾಡಿದ್ದೇವೆ. ಸತತವಾಗಿ 17 ವರ್ಷಗಳಿಂದ ರಾಜ್ಯ ಸರ್ಕಾರದಿಂದ ಪ್ರತಿಪಾದನೆಯನ್ನು ಮಾಡಿದ್ದೇವೆ. ಇದರ ಬಗ್ಗೆ ಇವತ್ತು ಏನು ತೀರ್ಪು ಬಂದಿದೆ, ಈ ತೀರ್ಪು ರಾಜ್ಯದ ಜನತೆಗೆ ಮತ್ತು ವಿಶೇಷವಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕಂಥ ರೈತರಿಗೆ ಅನ್ಯಾಯವಾಗಿದೆ. ಅದನ್ನು ನಾವೆಲ್ಲರೂ ಕೂಡ ಖಂಡಿಸಿದ್ದೇವೆ. ಮತ್ತು ಇದೇ ರೀತಿಯಾಗಿ ಪ್ರತಿಯೊಂದು ಹಂತದಲ್ಲೂ ಕೂಡ ಯಾವಾಗ ಯಾವಾಗ ಅನ್ಯಾಯವಾಗಿದೆ ಅಂತಹ ಸಂದರ್ಭಗಳಲ್ಲಿ ಖಂಡಿಸಿದ್ದೇವೆ, ಶ್ರೀಮಾನ್ ಖರ್ಗೆ ಯವರು ಸಂಬಂಧಪಟ್ಟ ಮಂತ್ರಿಯಾಗಿದ್ದರು. ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿದ್ದರು. ತಮ್ಮ ಸ್ಥಾನದಲ್ಲಿ ರಮೇಶ್ ಕುಮಾರ್‌ರವರು ಕೂಡ ಇದ್ದರು. ಮಾಧುಸ್ವಾಮಿ ಮತ್ತು ವಾಟಾಳ್ ನಾಗರಾಜ್ ಅವರು ನಿರಂತರವಾಗಿ ಹೋರಾಟ ಮಾಡಿದ್ದಾರೆ. ಇವತ್ತು ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಈ ಸಮಸ್ಯೆ dilute ಆಗುತ್ತಿದೆ. ಬೇರೆ ಬೇರೆ ಹೇಳಿಕೆಗಳು ಕೂಡ ಇವತ್ತು ನಮ್ಮನ್ನು ಬೇರೆ ದಾರಿಯಲ್ಲಿ ನಡೆಸುವ ಪ್ರಯತ್ನ ಆಗುತ್ತಿದೆ. ಇವತ್ತು ಸರ್ವ ಪಕ್ಷದ ಸಭೆಯಾಯಿತು. ಸರ್ವ ಪಕ್ಷದ ಸಭೆಯಲ್ಲಿ ಏನಾಯಿತು, ಆ Judgment copy ಎಲ್ಲ ಸದಸ್ಯರ ಕೈಯಲ್ಲಿ ಸಿಗಲಿಲ್ಲ. ನೀರಾವರಿ ತಜ್ಞರ, ಕಾನೂನು ಪಂಡಿತರ ಸಲಹೆಯನ್ನು ಕೂಡ ಪಡೆದು ಮತ್ತೊಂದು ಸಭೆಯನ್ನು ಕರೆಯುತ್ತೇನೆ, ಆ ಸಭೆಯಲ್ಲಿ ಪೂರ್ಣ ಪ್ರಮಾಣದ ಚರ್ಚೆಯಾಗಲಿ. ಚರ್ಚೆಯ ನಂತರ ಇವತ್ತು ನಮ್ಮ ಸರ್ಕಾರದ ನಿಲುವೇನು ಎನ್ನತಕ್ಕಂಥದ್ದರ

ಬಗ್ಗೆ ಬರೋಣ. ಇವತ್ತು ಒಂದು ತರಹದ ನಿರ್ಣಯವಾಗಿದೆ. ಇವತ್ತು ಒಂದು ಕಡೆ ಮುಖ್ಯಮಂತ್ರಿಗಳು ಹೇಳಿದ್ದಾರೆ, 22ನೇ ತಾರೀಖಿನ ದಿವಸ ಮತ್ತೊಂದು ಸರ್ವ ಪಕ್ಷದ ಸಭೆ ಕರೆಯುತ್ತೇನೆ, ಮತ್ತು ತೀರ್ಪಿನ ಕಾಪಿಗಳು ಎಲ್ಲ ಸದಸ್ಯರ ಕೈಯಲ್ಲಿ ಮುಟ್ಟಿದೆ, ನಾವೆಲ್ಲರೂ ಕೂಡ ಅದನ್ನು ನೋಡಿದ್ದೇವೆ. ಅದರಲ್ಲಿ ವಿಶೇಷವಾಗಿ ಏನೂ ಇಲ್ಲ. ನೀವು ಮತ್ತೊಂದು ಸಭೆಯನ್ನು ಕರೆದಮೇಲೆ ನಾವು ಚರ್ಚೆಯನ್ನು ಮಾಡೋಣ. ಇವತ್ತು ಏನಾಗುತ್ತಿದೆ, ಮುಖ್ಯಮಂತ್ರಿಗಳು ಗಮನಿಸಬೇಕು. ತಾವು ರಾಜ್ಯ ನಡೆಸತಕ್ಕವರು. ಇವತ್ತು ಇಂಥ ಒಂದು ಸಂದರ್ಭದಲ್ಲಿ, ವಿಶೇಷವಾಗಿ ಆ ಭಾಗದಿಂದ ತಾವು ಬರುತ್ತಿದ್ದೀರಿ. ಡಿ.ಟಿ. ಜಯಕುಮಾರ್ ಅವರು ಇದ್ದಾರೆ. ಜಿ.ಟಿ.ದೇವೇಗೌಡರು ಇದ್ದಾರೆ. ನಮ್ಮ ಚಲುವರಾಯಸ್ವಾಮಿಯವರು ಇದ್ದಾರೆ. ಇವರೆಲ್ಲರೂ ಕೂಡ ಆ ಭಾಗದಿಂದ ಬರುತ್ತಿದ್ದಾರೆ. ಸಿದ್ದರಾಮಯ್ಯನವರು ಕೂಡ ಆ ಭಾಗದಿಂದ ಬರುತ್ತಿದ್ದಾರೆ. ಅವರು ಕೂಡ ಹೇಳಿದ್ದಾರೆ. ಇದರ ಬಗ್ಗೆ ನಮ್ಮ ಸಂಪೂರ್ಣವಾದ ಬೆಂಬಲ ಇದೆ. ನಿನ್ನೆ ಸಂಯುಕ್ತ ಕರ್ನಾಟಕದಲ್ಲಿ ವೈ.ಎಸ್.ವಿ.ದತ್ತ ಅವರು ವಿಧಾನ ಪರಿಷತ್ತಿನ ಸದಸ್ಯರು, ಅವರು ಒಂದು ಕಾಂಗ್ರೆಸ್ ಪಕ್ಷದ ಮೇಲೆ ಗೂಬೆ ಕೂಡಿಸುವ ಕೆಲಸವನ್ನು ಮಾಡಿದ್ದಾರೆ. ಇವತ್ತು ದೇವೇಗೌಡರು ಬಹಳ ಮೌನವಾಗಿದ್ದಾರೆ. ಅವರ ಮೌನ ಇನ್ನು ಕೂಡ ಮುರಿದಿಲ್ಲ. ಈ ರಾಜ್ಯದ ಬಗ್ಗೆ ಕಾಂಗ್ರೆಸ್ ಪಕ್ಷ ಮಾಡತಕ್ಕ ಕುತಂತ್ರಕ್ಕೆ ಸರಿಯಾದ ಸಮಯದಲ್ಲಿ ಸರಿಯಾದ ಹೇಳಿಕೆಯನ್ನು ಕೊಡುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ವೈ.ಎಸ್.ವಿ.ದತ್ತ ಅವರು spokesman. ವೈ.ಎಸ್.ವಿ. ದತ್ತ ಅವರ ಮೇಲೆ ವೈಯಕ್ತಿಕವಾಗಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತಿಲ್ಲ. ಇವತ್ತಿನ ಸಂದರ್ಭದಲ್ಲಿ ನಾವು ಪಕ್ಷ ಭೇದ ಮರೆತು ನಿಮಗೆ ಬೆಂಬಲ ಕೊಡತಕ್ಕ ರೀತಿಯಲ್ಲಿ ಸರ್ವ ಪಕ್ಷದ ಸಭೆಯಲ್ಲಿ ಕೂಡ ಹೇಳಿದ್ದೇವೆ, ತೀರ್ಪು ಬಂದ ನಂತರವೂ ಕೂಡ ಹೇಳಿದ್ದೇವೆ. ಆದರೆ ಈ ರೀತಿಯಾದ ದ್ವಂದ್ವವಾದ ಹೇಳಿಕೆ ಏಕೆ? ಮತ್ತೊಂದು ಏನಾಗಿದೆ, ದೇವೇಗೌಡರು ಪ್ರಧಾನ ಮಂತ್ರಿಗಳ ಬಳಿಗೆ ನಿಯೋಗ ಹೋಗಬೇಕೆಂದು ಹೇಳಿದ್ದಾರೆ. ತೀರ್ಪಿನ ಬಗ್ಗೆ ಗೆಜೆಟ್ ನೋಟೀಫಿಕೇಷನ್ ಆಗಬಾರದು, ನಾನು ನಿಮಗೆ ಹೇಳಿದ್ದೇನೆ, you are the luckiest Chief Minister, ಏಕೆಂದರೆ ದೈವವೇ ತಂದು ಅಲ್ಲಿ ಕೂಡಿಸಿದೆ. ಮೊಟ್ಟ ಮೊದಲನೆಯದಾಗಿ ಒಳಗೆ ಬಂದರು, ಅಲ್ಲಿ ಕುರ್ಚಿ ಮೇಲೆ ಕುಳಿತುಬಿಟ್ಟರು. ಇವತ್ತು ಸೋಜ್ ಅವರೇನು

ಹೇಳಿದ್ದಾರೆ, ಮದ್ರಾಸ್‌ನಲ್ಲಿ ತೀರ್ಪು ಬಂದಿದೆ, ನಾವು ತರಾತುರಿಯಲ್ಲಿ ಮಾಡುತ್ತಿಲ್ಲ. Review Petition ಬಗ್ಗೆ ಅವತ್ತು ಪ್ರಸ್ತಾಪ ಇರಲಿಲ್ಲ. ಉಪ ಮುಖ್ಯಮಂತ್ರಿಗಳು ಹೇಳಿದರು, ನಾವು Review Petition ಗೆ ಹೋಗುತ್ತೇವೆಂದು ಹೇಳಿದರು. ಇನ್ನು 90 ದಿನಗಳಿದೆ ಎಂದು ಹೇಳಿದರು. ಅದರಲ್ಲಿ ಸೋಜ್ ಅವರೇನು ಹೇಳಿದ್ದಾರೆ, "90 ದಿವಸ ಇದೆ, we are not hurrying. ಗೆಜೆಟ್ ನೋಟೀಫಿಕೇಷನ್ ಮಾಡುವುದಕ್ಕೆ ನಾವು ಹೋಗುವುದಿಲ್ಲ. ಒಂದು ವರ್ಷವಾದರೂ ಕೂಡ ಅದನ್ನು ತಡೆ ಹಿಡಿಯುತ್ತೇವೆ. ಎನ್ನುವ ಮಾತನ್ನು ಸೋಜ್ ಅವರು ಹೇಳಿದ್ದಾರೆ. ಅದು ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ರೀತಿ ನೆಮ್ಮದಿ ತರತಕ್ಕದ್ದು. ಇವತ್ತು ಏನಾಗಿದೆ, ಈ ಒಂದು ವಿಷಯ ರಾಜಕೀಯವಾಗಿ ಪ್ರಧಾನ ಮಂತ್ರಿಗಳ ಮೇಲೆ ಒತ್ತಡ ತರತಕ್ಕ ರೀತಿಯಲ್ಲಿ ಆಗುತ್ತಿದೆ. ಇವತ್ತು ಪ್ರಧಾನ ಮಂತ್ರಿಗಳ ಬಳಿಗೆ ಹೋಗುವುದೇನೆಂದರೆ Gazette Notification ಆಗಬಾರದು, ಅದಕ್ಕೆ ಸರ್ವ ಪಕ್ಷ ಹೋಗುತ್ತಿರುವುದು. ಇವತ್ತು ಪ್ರಧಾನ ಮಂತ್ರಿ ಮೇಲೆ ಭಾರ ಹಾಕುವ ರೀತಿಯಲ್ಲಿ ಈ ರೀತಿ ಆಗುತ್ತಿದೆ, ನಮಗೆಲ್ಲ ನೆನಪು ಇದೆ. ಪಿ.ವಿ.ನರಸಿಂಹರಾವ್ ಅವರು ಪ್ರಧಾನ ಮಂತ್ರಿಗಳಾಗಿದ್ದರು. ಆಗ ದೇವೇಗೌಡರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. 205 TMC water ನೀರು ತಮಿಳುನಾಡಿಗೆ ಕೊಡಬೇಕಿತ್ತು, ಆಗ ಸದನ ನಡೆಯುತ್ತಿದೆ. He has not consulted anybody. ಸರ್ವ ಪಕ್ಷದ ಸಭೆಯನ್ನು ಕರೆಯದೇ, 205 tmc ನೀರನ್ನು ಬಿಟ್ಟರು. ನಾವು ವಿರೋಧ ಪಕ್ಷದ ಸ್ಥಾನದಲ್ಲಿದ್ದು ಕೇಳಿದ್ದೆವು. ಇಲ್ಲ, ನಾವು ಎಲ್ಲ ಕಡೆಗೆ ಕೇಂದ್ರದ ಜೊತೆಯಲ್ಲಿ ಸರಿಯಾಗಿ ಇರಬೇಕಾಗುತ್ತದೆ, ನರಸಿಂಹರಾವ್ ಅವರು 205 tmc ನೀರನ್ನು ಬಿಡಬೇಕೆಂದು ಹೇಳಿದ್ದಾರೆ. ನಾನು ಅದರಂತೆ ಬಿಟ್ಟಿದ್ದೇನೆ ಎನ್ನುವ ಮಾತನ್ನು ಸದನದಲ್ಲಿ ಕೂಡ ಹೇಳಿದ್ದಾರೆ. ಅದಾದ ಮೇಲೆ ಇವತ್ತು Tribunal Members ಆ ಭಾಗಕ್ಕೆ ಹೋಗಿದ್ದಾರೆ. Tribunal Member ಮೇಲೆ ನಮ್ಮ ವಿಶ್ವಾಸ ಇಲ್ಲ. ಅವರು ಉಡುಗೊರೆ ತೆಗೆದುಕೊಂಡಿದ್ದಾರೆನ್ನುವ ಮಾತನ್ನು ಕೂಡ ಹೇಳಿದ್ದಾರೆ. He went to the Supreme Court. Tribunal Members ಅವರು ಉಡುಗೊರೆ ಏನು ತೆಗೆದುಕೊಂಡಿದ್ದಾರೆ, ಅವರ ಮೇಲೆ ವಿಶ್ವಾಸ ಇಲ್ಲ ಎನ್ನುವ ಮಾತನ್ನು ಹೇಳಿದ ಮೇಲೆ Supreme Court ರಿಜೆಕ್ಟ್ ಮಾಡಿದರು. ಸಮ್ಮಿಶ್ರ ಸರ್ಕಾರ ಬಂತು.

ನಾನು ಮುಖ್ಯಮಂತ್ರಿಯಾದೆ. ಮತ್ತೊಮ್ಮೆ ನಾವು Supreme Courtಗೆ ಹೋಗತಕ್ಕ ರೀತಿಯಲ್ಲಿ ಬಹಳಷ್ಟು ವಿವಾದಗಳ ಮಧ್ಯದಲ್ಲಿ ಇವತ್ತು ನಮ್ಮ ಸರ್ಕಾರವನ್ನು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ, ಅವರು ರಾಷ್ಟ್ರಾಧ್ಯಕ್ಷರಿದ್ದಾರೆ ಎನ್ನತಕ್ಕ ರೀತಿಯಲ್ಲಿ ಆಗಲೂ ಕೂಡ ನಾವು ಹೋದೆವು. ಆಗಲೂ ಕೂಡ reject ಆಯಿತು. ಮತ್ತು ಯಾವ ರೀತಿಯಾಗಿ stricture ಪಾಸಾಗಿದೆ ಎನ್ನುವುದು ಕೂಡ ಇದೆ. ಇವತ್ತು ಅವರೇನು ಹೇಳುತ್ತಿದ್ದಾರೆ, ಇವತ್ತು ಪ್ರಧಾನ ಮಂತ್ರಿಗಳಿಗೆ, this is a golden opportunity ಹೇಗೆ ಸಿಕ್ಕಿಸಿ ಹಾಕುತ್ತಿದ್ದಾರೆಂದರೆ This is a golden opportunity, he has to take a decision. ಇವತ್ತು ನಮ್ಮ rescue ಗೆ ಬರಬೇಕೆನ್ನುವ ಮಾತನ್ನು ಕೂಡ ಹೇಳಿದ್ದಾರೆ. ಇದೆಲ್ಲ ಕೂಡ ಒಂದು ಕಡೆಗೆ ಇದೆ. ಇವತ್ತು ಕರ್ನಾಟಕದಲ್ಲಿ ಬಂದ್ ಆಗಿದೆ. ಬಂದ್‌ನ್ನು ಏಕೆ ಮಾಡಬೇಕು? ಅದರಿಂದ ಏನೂ ಪ್ರಯೋಜನ ಇಲ್ಲ. ಬಂದ್‌ನಿಂದ ನಾವೇನು ಕೂಡ achieve ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಮತ್ತು ತಾವೇನು ಇವತ್ತು ಹೇಳಿಕೆಯನ್ನು ಕೊಟ್ಟಿದ್ದೀರಿ, ತಾವು ಮತ್ತು ಉಪ ಮುಖ್ಯಮಂತ್ರಿಗಳು ನಾಳೆ ಪ್ರಧಾನ ಮಂತ್ರಿಗಳನ್ನು ಭೇಟಿ ಆಗುತ್ತೇವೆಂದು ಹೇಳಿದ್ದೀರಿ. ಒಂದು ಕಡೆ ಸರ್ವ ಪಕ್ಷದ ಸಭೆ 22 ನೇ ತಾರೀಖಿಗೆ ಕರೆಸತಕ್ಕದ್ದು. ತೀರ್ಪಿನ ಬಗ್ಗೆ ನಮಗೆಲ್ಲರಿಗೂ ಕಾಪಿ ಬಂದಿದೆ, ಅದರ ಬಗ್ಗೆ ನಾವು study ಮಾಡತಕ್ಕದ್ದು. ಮತ್ತು ನಮ್ಮ ರಾಜ್ಯದ ನಿಲುವು ಏನು ಇದೆ ಎನ್ನತಕ್ಕದ್ದು ಇಲ್ಲದೇ ಇವತ್ತು ಪ್ರಧಾನ ಮಂತ್ರಿಗಳ ಹತ್ತಿರ ಹೋಗತಕ್ಕದ್ದು. ಇದು ರಾಜ್ಯದ ಪ್ರಶ್ನೆ ಇದೆ. ನೀರಾವರಿ ಪ್ರಶ್ನೆ ಇದೆ. ಇವತ್ತು ರಾಜ್ಯದ ಉದ್ದಗಲಕ್ಕೂ ಕೂಡ ಪಕ್ಷಭೇದವನ್ನು ಮರೆತು ಪ್ರತಿಭಟನೆ ಮಾಡಿದ್ದಾರೆ. ಇವತ್ತು ಸರ್ಕಾರಕ್ಕೆ ನೆರವಾಗಿ ನಿಂತಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಕೂಡ ನಾಳೆ ದೆಹಲಿಗೆ ಹೋಗುತ್ತಿದ್ದಾರೆ. ನಿಯೋಗ ಅಲ್ಲ. ದೆಹಲಿಗೆ ಹೋಗುತ್ತಿದ್ದಾರೆ. ಇವತ್ತು experts opinion ತೆಗೆದುಕೊಳ್ಳಲಾರದೇ ಇವರು ಒಂದು ಕಡೆ ಹೇಳಿದರು. ಇವತ್ತು ರಾಜ್ಯದ ನಿಲುವು ಏನು ಇದೆ? Advocate General ಹೇಳಿದ್ದಾರೆ ಮತ್ತು Chairman ಆದಂತಹ ಶ್ರೀ ನಾರಿಮನ್ ಅವರು ಹೇಳಿದ್ದಾರೆ. ಶ್ರೀ ಕಾತರಕಿ ಅವರು ಹೇಳಿದ್ದಾರೆ. ಅದು ಅವರ ಅಭಿಪ್ರಾಯ. ಆದರೂ

ಕೂಡ ಯಾರೂ ತೀರ್ಪನ್ನು ಧಿಕ್ಕರಿಸಿ ಏನೂ ಕೂಡ ಪತ್ರಿಕಾ ಹೇಳಿಕೆಯನ್ನು ಕೊಟ್ಟಿಲ್ಲ. ಇವರೇ ಹೇಳಿದ್ದಾರೆ. ಸದನದಲ್ಲಿ ಚರ್ಚೆ ಆದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದು ಅವರ ವೈಯಕ್ತಿಕ ಅಭಿಪ್ರಾಯ ಎಂದು ಹೇಳಿದರು. ಇವತ್ತು ರಾಜ್ಯದ ಒಂದು ಪ್ರಶ್ನೆ ಬಂದ ಹಾಗೆ, ಕಾವೇರಿ ಜಟಿಲವಾದ ಪ್ರಶ್ನೆ ಬಂದ ಹಾಗೆ 17 ವರ್ಷದ ನಂತರ ತೀರ್ಪು ರಾಜ್ಯದ ಜನತೆಗೆ ಅನುಕೂಲ ಆಗಲಾರದಂತಹ ರೀತಿಯಲ್ಲಿ ಬಂದ ಹಾಗೆ you have to take a collective decision in democratic set up because you are running the Government. You are having a greater responsibility. ಇವತ್ತು ನಿಮಗೆ ಜವಾಬ್ದಾರಿ ಇದೆ. ಮನುಷ್ಯನಿಗೆ ಅಧಿಕಾರ ಬರುತ್ತದೆ ಹೋಗುತ್ತದೆ. ನಾನು ಸಹ ಅಲ್ಲಿ ಕುಳಿತು ಇಲ್ಲಿ ಬಂದಿದ್ದೇನೆ. ಯಾವಾಗಲೂ ಅಧಿಕಾರ ಶಾಶ್ವತ ಅಲ್ಲ. ಆದರೆ ಅಧಿಕಾರ ಸಿಕ್ಕಾಗ ಸರಿಯಾದ ರೀತಿಯಲ್ಲಿ ರಾಜ್ಯದ ಜನತೆಯಲ್ಲಿ ವಿಶ್ವಾಸ ಮೂಡತಕ್ಕ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ನಾವು ಮೊದಲೇ ನಾವು ಹೇಳಿದ್ದೇವೆ. ಏನೋ ಇದರಲ್ಲಿ ಎಡವಿದ್ದೇವೆ ಎನ್ನತಕ್ಕದ್ದನ್ನು ಹೇಳಿದ್ದೇವೆ. ಇಂತಹ ಬೆಂಬಲ ಯಾವಾಗಲೂ ಸಿಕ್ಕಿಲ್ಲ. ಬಂದ್ ಯಶಸ್ವಿ. ಆಗಿದೆ. ಕಾಂಗ್ರೆಸ್ ಪಕ್ಷದವರು ಸದನಕ್ಕೆ ಬಂದಿಲ್ಲವೆಂದು ಹೇಳಿ you have not appreciated. ಅವರು ತಮ್ಮದೇ ಆದ ಧಾಟಿಯಲ್ಲಿ ಭಾಷಣ ಹೊಡೆದರು. ಪಾಪ ಅವರ ಪರಿಶ್ರಮ ಇವತ್ತಿನ ದಿವಸ ಏನಾಗಬೇಕು? ನಾನು ಹೇಳತಕ್ಕದ್ದು ಇಷ್ಟೇ. ಮಾನ್ಯ ಸಭಾಧ್ಯಕ್ಷರೇ ಇವತ್ತು ಈ ಎಲ್ಲಾ ವಿಷಯಗಳಿಂದ ರಾಜ್ಯದ ಜನರ ಮನಸ್ಸಿನಲ್ಲಿ ಏನೋ ಒಂದು ತರಹದ ರಾಜಕೀಯ ಮಾಡುತ್ತಿದ್ದಾರೆ. ಎಲ್ಲೋ ಒಂದು ಕಡೆ ಹೋಗಬೇಕೆನ್ನ ತಕ್ಕ ಅವರ ಆಸೆ ಆಕಾಂಕ್ಷೆ ಏನು ಇದೆ ಅದನ್ನು ಈಡೇರಿಸತಕ್ಕ ರೀತಿಯಲ್ಲಿ ಕಾವೇರಿ ವಿಷಯವನ್ನು ಅವರು ಉಪಯೋಗ ಮಾಡುತ್ತಿದ್ದಾರೆ ಎನ್ನತಕ್ಕ ಮಾತು ಕೂಡ ಬಂದಿದೆ. ಅದಕ್ಕೆ ನಾನು ಪ್ರಸ್ತಾಪ ಮಾಡಿದ್ದೇನೆ. ಇನ್ನೂ ಕೂಡ ನಮ್ಮೆಲ್ಲ ಹಿರಿಯ ಸದಸ್ಯರು ಕೂಡ ಪ್ರಸ್ತಾಪ ಮಾಡುವವರು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ fortunately he is here, ಅವರು ಕೊನೆಗೆ ಉತ್ತರ ಕೊಡುತ್ತಾರೆ. ಇಷ್ಟು ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್): ಮಾನ್ಯ ಸಭಾಧ್ಯಕ್ಷರೇ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತಾಪ ಮಾಡುವಾಗ ಸವಿಸ್ತಾರವಾಗಿ ಈ ಒಂದು ತೀರ್ಪಿನ ಬಗ್ಗೆ ಮತ್ತು 5ನೇ ತಾರೀಖು ತೀರ್ಪು ಆದ ಮೇಲೆ ಮುಂದೆ ಯಾವ ರೀತಿಯಾಗಿ ರಾಜ್ಯ ಸರ್ಕಾರ, ವಿರೋಧ ಪಕ್ಷದ ನಾಯಕರು ಮತ್ತು Floor Leaders ಎಲ್ಲರನ್ನೂ ಕೂಡ ಕರೆಸಿ ಮಾತನಾಡಿದರು. ಎಂದು ತಿಳಿಸಿದ್ದಾರೆ. ಮಾತನಾಡಿದ ಮೇಲೆ ಅಲ್ಲಿ ಬಂದಂತಹ ತೀರ್ಮಾನ ಎಂದರೆ ನಾವೆಲ್ಲರೂ ಸೇರಿ ಏನು 900 ಪುಟದ ತೀರ್ಪು ಇದೆ ಅದನ್ನು ಸಂಪೂರ್ಣವಾಗಿ, ಆಳವಾಗಿ ಅಭ್ಯಾಸ ಮಾಡಿ ಯಾವ ನಿಲುವನ್ನು ತೆಗೆದುಕೊಳ್ಳಬೇಕು ಎನ್ನತಕ್ಕದ್ದನ್ನು ನಿರ್ಣಯ ಮಾಡಿ ಸರ್ವ ಪಕ್ಷದವರೂ ಒಂದೇ ನಿರ್ಣಯವನ್ನು ರಾಜ್ಯದ ಹಿತದೃಷ್ಟಿಯಿಂದ ಮತ್ತು ಕಾವೇರಿಯ ಒಂದು ಬೆಲ್ಟ್‌ನಲ್ಲಿ ಇರತಕ್ಕ ರೈತರ ಹಿತದೃಷ್ಟಿಯಿಂದ ಹೋಗೋಣ ಎನ್ನತಕ್ಕ ಅಭಿಪ್ರಾಯ ಮೂಡಿದ ಮೇಲೆ, ಆ ಸಭೆಯನ್ನು ಬರ್ಖಾಸ್ತ್ ಮಾಡಲಾಯಿತು. ನಮಗೂ ಕೂಡ, ವಿರೋಧ ಪಕ್ಷದಲ್ಲಿದ್ದಂತಹ ನಾಯಕರಿಗೂ ಕೂಡ ಮತ್ತು ಶಾಸಕರಿಗೂ ಕೂಡ ಅನೇಕ ಸಾರಿ ಮಾಧ್ಯಮದ ಮಿತ್ರರು, Electronic Media, ಪತ್ರಿಕೆಯವರು ಎಲ್ಲರೂ ಕೂಡ ಕೇಳಿದರೂ, ನಾನು ಒಂದೇ ಮಾತನ್ನು ಹೇಳಿದ್ದೇನೆ. ರಾಜ್ಯದ ಹಿತದೃಷ್ಟಿಯಿಂದ ಸರ್ವ ಪಕ್ಷದ ನಿರ್ಣಯ ಏನಾಗುತ್ತದೆ ಅದಕ್ಕೆ ನಾವೆಲ್ಲರೂ ಬದ್ಧರಿದ್ದೇವೆ. ಎಲ್ಲರೂ ಒಗ್ಗಟ್ಟಾಗಿ ಒಂದೇ voiceನಲ್ಲಿ ಹೋಗಬೇಕಾಗಿದೆ. ನಮ್ಮ ಒಗ್ಗಟ್ಟನ್ನು ಪ್ರದರ್ಶನ ಮಾಡದೇ ಹೋದರೆ ಖಂಡಿತವಾಗಿ ನಮಗೆ ಇದರಲ್ಲಿ ನಮಗೆ ಇನ್ನೂ ಅನ್ಯಾಯ ಆಗುತ್ತದೆ. ನಾವು ನಗೆಪಾಟಲಿಗೆ ಒಳಗಾಗುತ್ತೇವೆ ಎನ್ನತಕ್ಕ ದೃಷ್ಟಿಯಿಂದ ನಾವ್ಯಾರೂ ಕೂಡ ಮಾತನಾಡಿಲ್ಲ. ನಮಗೆ ಆ ವಿಷಯ ಗೊತ್ತಿದ್ದರೂ ಕೂಡ ನಾವು ಹೇಳಲಿಕ್ಕೆ ಹೋಗಲಿಲ್ಲ. ಭಿನ್ನಾಭಿಪ್ರಾಯ ವ್ಯಕ್ತಪಡಿಸಲಿಲ್ಲ. ನಮ್ಮದೇ ನಡೆಯಬೇಕು ಎನ್ನತಕ್ಕ ದೃಷ್ಟಿಯಿಂದ ಕೂಡ ಹೇಳಲಿಲ್ಲ. ಅಲ್ಲಿ ಈಗಾಗಲೇ ಅವರು ಹೇಳಿದ ಹಾಗೆ,ಪ್ರಸ್ತಾಪ ಮಾಡಿದ ಹಾಗೆ ಶ್ರೀ ನಾರಿಮನ್ ಅವರ ಅಭಿಪ್ರಾಯ ಕೂಡ ಪತ್ರಿಕೆಯಲ್ಲಿ ಬಂದಿತ್ತು. ಮಾಧ್ಯಮದಲ್ಲಿ ಬಂದಿತ್ತು. ಅದೇ ರೀತಿಯಾಗಿ ಶ್ರೀ ಕಾತರಕಿ ಅವರದ್ದು ಕೂಡ ಬಂದಿತ್ತು ಮತ್ತು Advocate General ಅವರ ಹೇಳಿಕೆ ಕೂಡ ಪತ್ರಿಕೆಯಲ್ಲಿ ಬಂದಿತ್ತು. ಪತ್ರಿಕೆಯಲ್ಲಿ ಬಂದಿದ್ದನ್ನು ಸರ್ವ

ಪಕ್ಷದ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದು ಸರ್ಕಾರದ ನಿಲುವು ಅಲ್ಲ. ಅದು ವೈಯಕ್ತಿಕವಾಗಿ ಅವರು ಹೇಳಿಕೊಂಡಿರಬಹುದೇ ಹೊರತಾಗಿ ನಾವು ಇದನ್ನು ಹೇಳಿ ಎಂದು ಎಂದೂ ಕೂಡ ಹೇಳಿಲ್ಲ ಎನ್ನತಕ್ಕ ಮಾತನ್ನು ಅವರು ಹೇಳಿದರು. ಅದು ಸಂತೋಷ. ಅದು ಅಲ್ಲಿಗೇ ನಿಂತಿದೆ. ಅದೇ ರೀತಿಯಾಗಿ ಅಲ್ಲಿರತಕ್ಕಂಥ Advocate General ಅವರು clarify ಮಾಡಿದರು. ನಾನು ಆ ರೀತಿಯಾಗಿ ಹೇಳಲೇ ಇಲ್ಲ. ಅದನ್ನು ನನ್ನ opinion ಎಂದು ಹೇಳಿ ಪತ್ರಿಕೆಯಲ್ಲಿ ಬಂದರೆ ಅದು ತಪ್ಪು ಎಂದು ಅವರು ಕೂಡ ಹೇಳಿಕೊಂಡಿದ್ದಾರೆ. ಆದರೆ ಮಾಧ್ಯಮದಲ್ಲಿ, ಟಿ.ವಿ. ಮೀಡಿಯಾದಲ್ಲಿ, ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಅವರ ಮುಖವನ್ನು ಅವರ voice ಅನ್ನು ಶ್ರೀ ಕಾತರಕಿ ಅವರದ್ದು ಆಗಲಿ, Advocate General ಅವರದ್ದು ಆಗಲೀ ಹೇಳಿದ್ದನ್ನು ನೀವೆಲ್ಲರೂ ಕೂಡ ನೋಡಿದ್ದೀರಿ. ದುರ್ದೈವ ಏನೆಂದರೆ ಇಷ್ಟು ಸ್ಪಷ್ಟವಾಗಿ ಮಾಧ್ಯಮದಲ್ಲಿ ಚಿತ್ರ ಸಹಿತ ಬಂದರೂ ಕೂಡ ಅವರ ಬಾಯಿ ಉಚ್ಚಾರಗಳು ಕೂಡ ಅದರಲ್ಲಿ ಬಂದರೂ ಕೂಡ ಅದು ನನ್ನ voice ಅಲ್ಲ" ಎಂದು ಹೇಳಿದ ಮೇಲೆ ಇದು ಯಾವ ನ್ಯಾಯ? ನಾವು ಎಲ್ಲಿಗೆ ಹೋಗಬೇಕು? ಯಾರ ಮುಂದೆ ಹೇಳಬೇಕು? ಹೇಗೆ ನಡೆದುಕೊಳ್ಳಬೇಕು ಎನ್ನತಕ್ಕದ್ದೇ ನನಗೆ ಗೊತ್ತಾಗುತ್ತಿಲ್ಲ. ಇದು ಒಂದು ಕಡೆ. ಅದನ್ನೂ ನಾವು ಸಹನೆ ಮಾಡಿಕೊಂಡು, ಅವರು ಹೇಳದೇ ಇದ್ದರೆ ಇರಲಿ, ರಾಜ್ಯದ ಹಿತದೃಷ್ಟಿಯಿಂದ ನಾವೇನು ಮಾಡಬೇಕು? ಅದನ್ನು ಮಾಡೋಣ ಎಂದು ಹೇಳಿ ಎಲ್ಲರೂ ಕೂಡ ಒಂದು ಸಭೆ ನಡೆಸಿ ಅದನ್ನು ಅಲ್ಲಿಗೆ ಮುಕ್ತಾಯ ಮಾಡಿದರು. ಈತನ್ಮಧ್ಯೆ ಜೆಡಿಎಸ್ ವಕ್ತಾರರೊಬ್ಬರು statement ಕೊಟ್ಟರು. ಕಾಂಗ್ರೆಸ್‌ನವರೇ ಇದಕ್ಕೆ ಕಾರಣಕರ್ತರು ಮತ್ತು ಮಾನ್ಯ ದೇವೇಗೌಡರು ಮೌನ ಏಕೆ ವಹಿಸಿದ್ದಾರೆ ಎಂದು ಕೇಳುತ್ತಾರೆ. ಅಥವಾ ಜೆಡಿಎಸ್ ಸುಮ್ಮನೇ ಇದೆ ಎಂದು ಕೇಳುತ್ತಾರೆ ಎನ್ನತಕ್ಕ ಪ್ರಚೋದನೆ ಮಾತು ಪತ್ರಿಕೆಯಲ್ಲಿ ಬಂತು. ಅದು ಅವಶ್ಯ ಇರಲಿಲ್ಲ. ಏಕೆಂದರೆ ಪದೇ ಪದೇ ಸಹಜವಾಗಿ ಒಬ್ಬರು ರಾಷ್ಟ್ರೀಯ ನಾಯಕರು, ಮಾಜಿ ಪ್ರಧಾನಿಗಳು ಹಿಂದೆ ಅನೇಕ ಸಾರಿ ತೀರ್ಪುಗಳು ಬಂದಾಗ ತಕ್ಷಣವೇ react ಮಾಡಿದ್ದನ್ನು ನೀವೆಲ್ಲರೂ ಕೂಡ ಈ ಕಡತದಲ್ಲಿ ತೆಗೆದು ನೋಡಿ ಅಥವಾ ಪತ್ರಿಕೆಯಲ್ಲಿ ನೋಡಿ. React ಮಾಡಿದ್ದಾರೆ. ಈ ಸಾರಿ ಮಾತ್ರ 3-4 ದಿವಸ ಏಕೆ ಸುಮ್ಮನೆ

ಇದ್ದರು ಎಂದು ಸಹಜವಾಗಿ ಕೇಳುತ್ತಾರೆ. ಅವರು ಹಿಂದೆ react ಮಾಡದೇ ಇದ್ದಿದ್ದರೆ ಅಥವಾ ಅವರು ಈ ಹಿಂದೆ ಅದರ ಬಗ್ಗೆ ಚಿಂತನೆಯನ್ನೇ ಮಾಡದೇ ಇದ್ದಿದ್ದರೆ ಯಾರೂ ಕೇಳುತ್ತಿರಲಿಲ್ಲ. ಆದರೆ ಅನೇಕ ಸಾರಿ ತೀರ್ಪು ಬಂದ ತಕ್ಷಣ ಅಥವಾ ತೀರ್ಪು ಬರುವ ಮುಂಚೆ ವಿಚಾರ ಮಾಡತಕ್ಕದ್ದು ಅನೇಕ ಸಾರಿ ಆಗಿದೆ.

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು): ಮಾನ್ಯ ಖರ್ಗೆಯವರು ಹಿರಿಯ ಸದಸ್ಯರು. ಅವರು ಕಾವೇರಿ ವಿಚಾರ discussion ಮಾಡುತ್ತಿದ್ದಾರೋ ಅಥವಾ ಮಾನ್ಯ ದೇವೇಗೌಡರ ಬಗ್ಗೆ discussion ನಡೆಯುತ್ತಿದೆಯೋ ಎಂದು ಒಂದೂ ಗೊತ್ತಾಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲ ದೇವೇಗೌಡರ ಬಗ್ಗೆ ಅಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಅವರು ಇಲ್ಲಿ ಇಲ್ಲವಲ್ಲ. ಅವರು ಸಭೆಯಲ್ಲಿ ಇಲ್ಲ. ಅವರು ಸಭೆಯಲ್ಲಿ ಇದ್ದು argue ಮಾಡುವುದಕ್ಕೆ ಆಗುವುದಿಲ್ಲ. ನಾನು ಹೇಳುವುದು ಅವರ ಹೆಸರು ಹೇಳುವುದು ಬೇಡ. ದಯಮಾಡಿ ಏನಾದರೂ ವಿಷಯ ಇದ್ದರೆ ಹೇಳಲಿ, ಬೇಕಾದರೆ ಚರ್ಚೆ ಮಾಡಲಿ. ನಮ್ಮದೇನೂ ಅಭ್ಯಂತರ ಇಲ್ಲ. ವ್ಯಕ್ತಿಗತವಾಗಿ ಒಬ್ಬರ ಬಗ್ಗೆ ಹೇಳುವುದು ಸೂಕ್ತವಲ್ಲ ಎಂದು ನನ್ನ ಭಾವನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಶ್ರೀ ದತ್ತ ಅವರ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಅವರು ಈ ಮನೆಯ ಸದಸ್ಯರಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಅವರು ನಿಮ್ಮ ಪಕ್ಷದ spokesman. ನಿಮ್ಮ ಪಕ್ಷದ spokesman. ಅವರು ಹೇಳಿದ್ದಾರೆ. ಕಾಂಗ್ರೆಸ್ ಬಗ್ಗೆ ಕೆಲವು ದೂರುಗಳನ್ನು ಮಾಡಿದಾಗ ಅದನ್ನು ಹೇಳಬೇಕಾಗುತ್ತದಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಸಾರ್, ತಾವು ಹಿರಿಯ ಸದಸ್ಯರು ಇದ್ದೀರಿ. ಪತ್ರಿಕೆಯಲ್ಲಿ ಮತ್ತು ಯಾರೋ ಹೇಳಿಕೆಯನ್ನು ಕೊಡುವುದನ್ನು ಸದನದಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ ಎಂದು ನನ್ನ ಭಾವನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆಯಿತು, ಅದನ್ನು ಆಮೇಲೆ ಸಮರ್ಥನೆ ಮಾಡಿಕೊಳ್ಳುತ್ತೇನೆ. ಬೇಡ ಎಂದು ಹೇಳುವುದಿಲ್ಲ. ನಮ್ಮಲ್ಲಿ ಏನು ಒಗ್ಗಟ್ಟು ಇತ್ತು? ಆ ಒಗ್ಗಟ್ಟನ್ನು...

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಹಾಗೂ ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ತಾವು ಇದರ ಬಗ್ಗೆ ಚರ್ಚೆ ಮಾಡಲು ಆಕ್ಷೇಪಣೆ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದಾಗ ಕೂಡ ಅವರು ಹೇಳಲಿ ಎಂದು ನಾವು ಸುಮ್ಮನೇ ಇದ್ದೆವು. ಈಗ ಅವರು ನಮಗೆ ನೋಟೀಸ್ ಕೊಟ್ಟಿಲ್ಲ. ಯಾವ ನಿಯಮಾವಳಿಗಳ ಕೆಳಗೆ ಇದನ್ನು ಎತ್ತಿದ್ದಾರೆ ಎನ್ನತಕ್ಕದ್ದು ಕೂಡ ಇಲ್ಲ. ಹೀಗೆ ತಕ್ಷಣದಲ್ಲಿ ಈ ವಿಷಯಗಳನ್ನು ಪ್ರಸ್ತಾಪ ಮಾಡಿದರೆ, ನಮಗೆ ಉತ್ತರ ನೀಡಲು ಕಷ್ಟವಾಗುತ್ತದೆ. ಅದು ಯಾವ ಉದ್ದೇಶವೆಂದು ಗೊತ್ತಾದರೆ ಅದಕ್ಕೆ ಸರ್ಕಾರದಿಂದ ನಾವು ಒಂದು ಪ್ರತಿಕ್ರಿಯೆ ಕೊಡಬಹುದು. ಆ ಕಾರಣಕ್ಕಾಗಿ ದಯವಿಟ್ಟು ಇದನ್ನು ತಾವು ಪರಾಮರ್ಶಿಸಬೇಕು. ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಎಲ್ಲಾ ಸದಸ್ಯರು ಇದರಲ್ಲಿ ಭಾಗವಹಿಸುವುದಾಗಿದ್ದರೆ, ಯಾವ ನಿಯಮಾವಳಿ ಕೆಳಗೆ ಇದನ್ನು ತಂದಿದ್ದಾರೆ? ಮತ್ತು ತಾವು ಯಾವ ನಿಯಮಾವಳಿ ಕೆಳಗೆ ಅವರಿಗೆ permission ಕೊಟ್ಟಿದ್ದೀರಿ? ಇದಾದರೂ ನಮಗೆ ಗೊತ್ತಾಗಬೇಕಲ್ಲ. ಕಾರ್ಯಕಲಾಪಗಳನ್ನು ಬದಿಗೊತ್ತಿ ಮಾತನಾಡತಕ್ಕಂಥಾದ್ದೂ ಕೂಡ ಇದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: Zero Hourನಲ್ಲಿ ನಾವು ಎತ್ತಿದ್ದೇವೆ, ತಾವು ಅನುಮತಿ ಕೊಟ್ಟಿದ್ದೀರಿ. ಅವರು ಮಾತನಾಡಿದ ನಂತರ ನಾನು ಮಾತನಾಡಲು ನಿಂತೆ. ತಾವು permission ಕೊಟ್ಟಿರಿ. ತಾವು permission ಕೊಟ್ಟ ನಂತರ ನಾನು ಮಾತನಾಡುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: Zero Hour ಎಂಬುದು ತಮಗೆಲ್ಲರಿಗೂ ಗೊತ್ತಿದೆ. ನಿನ್ನೆ ಸದನ adjourn ಆದ ಮೇಲೆ ಇವತ್ತು ಸದನ ಸೇರಿದ ಮಧ್ಯದಲ್ಲಿ ಏನಾದರೂ ಘಟನೆ ನಡೆದಾಗ ಮಾತ್ರ ಶೂನ್ಯವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಬಹುದು. ಅವರು react ಮಾಡಿರುವುದು ನಮ್ಮ ವಕ್ತಾರ ಎಂದು. ಆ ತರಹ ಇರುವುದರಿಂದ ಮಧ್ಯದ ಅವಧಿಯಲ್ಲಾಗಿದ್ದರೆ ಮಾತ್ರ ಶೂನ್ಯವೇಳೆಯ ಪ್ರಶ್ನೆ ಬರುತ್ತದೆ. ನಮಗೆ ಅದರ notice ಕೊಟ್ಟಿಲ್ಲ. ಸದನಕ್ಕೂ ಕೊಟ್ಟಿಲ್ಲ, ಶೂನ್ಯವೇಳೆಯಲ್ಲಿ ಪ್ರಸ್ತಾಪವಾದರೆ, ನಮಗೆ ಪ್ರತಿಕ್ರಿಯೆ ನೀಡಲು ಕಷ್ಟವಾಗುತ್ತದೆ.

ಶ್ರೀ ಎನ್. ಧರ್ಮಸಿಂಗ್: ಕಾವೇರಿ ರಾಜ್ಯದ ಅತ್ಯಂತ ಜಟಿಲವಾದ ಸಮಸ್ಯೆ. ನಾಳೆ ಪ್ರಧಾನಮಂತ್ರಿ ಬಳಿಗೆ ನಿಯೋಗ ಹೋಗುತ್ತಿರುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಾವೇ ಹೋಗುತ್ತೇವೆಂತಲೂ ಹೇಳಿದ್ದಾರೆ. ಇದಕ್ಕೆ ಯಾವ ನಿಯಮವಿದೆ? ಕಾವೇರಿ ಬಗ್ಗೆ ನಿನ್ನೆ ನಡೆದಂಥ ಬಂದ್ ಏನಿದೆ, ಅದರ ಹಿನ್ನಲೆಯಲ್ಲಿ ಆಗತಕ್ಕಂಥ ವಿವರಗಳನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಕಾವೇರಿ ಬಗ್ಗೆ ಪ್ರಸ್ತಾಪಿಸಲು ಶೂನ್ಯವೇಳೆಯಲ್ಲಿ ಯಾವ ನಿಯಮ ಬೇಕು? ಇವತ್ತು ಎಲ್ಲ ಜನರಿಗೂ ಕಾವೇರಿ ನೀರು ಬೇಕು. ನಾವು ಒಪ್ಪುತ್ತೇವೆ. ತಾವು ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದೀರಿ. ಯಾವ ನಿಯಮದೊಳಗೆ ತಾವು ಪ್ರಸ್ತಾಪ ಮಾಡಿದ್ದೀರಿ? ಎಲ್ಲರೂ ಮಾತನಾಡುತ್ತಿರುವುದನ್ನು ಒಪ್ಪುತ್ತೇವೆ. ಆದರೆ, ಜಟಿಲವಾದ ಇಂತಹ ಒಂದು ವಿಷಯದ ಬಗ್ಗೆ ತಾವು ಆಕ್ಷೇಪಣೆ ಮಾಡಬಾರದು. ನಾವು ಏನು ಹೇಳಬೇಕಾಗಿದೆಯೋ, ಅದನ್ನು ಹೇಳುತ್ತೇವೆ. ಸರ್ಕಾರದ ಕಡೆಯಿಂದ ಉತ್ತರ ಕೊಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ನಮಗೆ ಆ notice ಆದರೂ ಬೇಕಲ್ಲ. ನಮ್ಮಿಂದ ತಾವು ಉತ್ತರ ಬಯಸುತ್ತೀರಿ. ಆ notice ಆದರೂ ಕೊಡಬೇಕು. ಕಛೇರಿಯಲ್ಲಾದರೂ ಇರಬೇಕು. ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದರೂ ಕೂಡ ನಾವು ಅದಕ್ಕೆ ಆಕ್ಷೇಪಣೆ ಮಾಡುತ್ತಿಲ್ಲ. ಇದಕ್ಕೆ ನಾವು ಉತ್ತರ ಕೊಡಬೇಕಲ್ಲ. ಆ noticeನ copy ಆದರೂ ಬೇಕಲ್ಲ. ನೋಡಿ, all of a sudden ಹೇಳಿದರೆ ನಮಗೆ ಪ್ರತಿಕ್ರಿಯೆ ನೀಡಲು ಕಷ್ಟವಾಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: It is only mentioning.

ಶ್ರೀ ಎಂ.ಪಿ. ಪ್ರಕಾಶ್: ವಿಷಯವನ್ನು mention ಮಾಡಲಿ. ಈಗ ದೀರ್ಘವಾಗಿ ಎಲ್ಲರೂ ಮಾತನಾಡುವುದಕ್ಕೆ ಅವಕಾಶವಿದೆ. ತಮಗೂ ಗೊತ್ತಿರುವಂತೆ, ಶೂನ್ಯವೇಳೆಯಲ್ಲಿ ವಿಷಯವನ್ನು ಯಾರು ಪ್ರಸ್ತಾಪ ಮಾಡುತ್ತಾರೋ, ಅವರನ್ನು ಬಿಟ್ಟು ಬೇರೊಬ್ಬರು ಮಾತನಾಡಲು ಅವಕಾಶವಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ತಾವು ಆಕ್ಷೇಪಣೆ ಎತ್ತಿದಿರಲ್ಲ. ಅದನ್ನು ತಾವು ಮುಂಚಿತವಾಗಿಯೇ ಹೇಳಬೇಕಾಗಿತ್ತು.

ಶ್ರೀ ಎಂ.ಪಿ. ಪ್ರಕಾಶ್: ವಿರೋಧ ಪಕ್ಷದ ನಾಯಕರು ಹೇಳುತ್ತಾರೆಂದಾಗ ನಾವು ಅದಕ್ಕೆ ಗೌರವ ಕೊಡಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ: ತಾವು ಮುಂಚಿತವಾಗಿಯೇ ಆಕ್ಷೇಪಣೆ ಎತ್ತಿದ್ದರೆ, I could understand, ಅದರ ಬಗ್ಗೆ debate ಸಹ ಆಗುತ್ತಿತ್ತು. ಆದರೆ, ನೀವು ಮುಂಚಿತವಾಗಿ ಆಕ್ಷೇಪವೆತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ, ಅಧರ ಬಗ್ಗೆ ಮಾನ್ಯ ಖರ್ಗೆಯವರು ಸಹ ಪ್ರಸ್ತಾಪಿಸುತ್ತಿದ್ದಾರೆ, ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತಾವು ಈಗ ಆಕ್ಷೇಪಣೆ ಎತ್ತಿದರೆ ಹೇಗೆ? ಕಾವೇರಿ ಬಗ್ಗೆ ಪ್ರಸ್ತಾಪವಾಗಬಾರದೆಂದು ಏನಾದರೂ ತಮ್ಮ ಮನಸ್ಸಿನಲ್ಲಿದೆಯೇ? ಹಾಗಿದ್ದರೆ, ಹೇಳಿ. ಮೊದಲು ತಾವು ಹೇಳಿದ ಹಾಗೆ 24 ಗಂಟೆಯಲ್ಲಿ ಏನಾಗಿದೆ, ಆಗಿದೆ, ಅದನ್ನು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು statement ಮಾಡಿದ್ದಾರೆ.

ಅಧ್ಯಕ್ಷರು: ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದು emotional subject ಆದ್ದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಾಗ ನಾನು ಸುಮ್ಮನೆ ಅವಕಾಶ ಮಾಡಿಕೊಟ್ಟಿದ್ದೇನೆ. ಅದರ ಬಗ್ಗೆ ವಿವರವಾದ ಚರ್ಚೆಯ ಅಗತ್ಯವಿಲ್ಲ. ಅವರು ಗಮನ ಸೆಳೆದಿದ್ದರೂ, ನೀವು ಏನು ಹೇಳಬೇಕೋ ಹೇಳಿ,

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಚರ್ಚೆ ಮಾಡುವುದಕ್ಕೆ ಹೋಗುತ್ತಿಲ್ಲ. ಕೇವಲ ಕೆಲವು ವಿಷಯಗಳು ಮಾತ್ರ ತಮ್ಮ ಗಮನಕ್ಕೆ, ಸದನದ ಗಮನಕ್ಕೆ ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅಂದರೆ, ಎಷ್ಟರ ಮಟ್ಟಿಗೆ ಇದು ಸಮಂಜಸ? ನಾವು ಒಗ್ಗಟ್ಟಿನ ಪ್ರದರ್ಶನ ಮಾಡಿದರೂ ಕೂಡ ಒಡಕಿನ ಮಾತನಾಡತಕ್ಕಂಥಾದ್ದು ಒಳ್ಳೆಯದೇ? ಅಥವಾ ತಾಳ್ಮೆ ಇಲ್ಲದೆ ಅದೇ ಮಾತನ್ನು ನಮ್ಮ ಸರ್ವ ಪಕ್ಷದ ಸಭೆಯಲ್ಲಿ ಹೇಳಿ ಅಥವಾ ನಮ್ಮನ್ನು ಕರೆದು ಹೇಳಿದಿರಿ. ನೋಡಿ ಈ ರೀತಿಯಾಗಿದೆ, ಈ ರೀತಿಯಾಗಿ ನಾವು ನಡೆದುಕೊಳ್ಳಬೇಕೆಂದಿದ್ದರೆ, ಒಪ್ಪಿಕೊಳ್ಳಬಹುದು. ಆದರೆ, ಪತ್ರಿಕೆಗಳ ಮುಖಾಂತರ ಎಲ್ಲರೂ ಹೇಳಿಕೆಗಳನ್ನು ಕೊಟ್ಟುಕೊಂಡು ಹೋದರೆ ಇಲ್ಲೇನಾಗುತ್ತದೆ? ಕೊನೆಗೆ, ಪಕ್ಷ ರಾಜಕಾರಣ ಬರುತ್ತದೆಯೇ ಹೊರತು ರಾಜ್ಯದ ಹಿತ ಮತ್ತು ರೈತರ ಹಿತವನ್ನು ನಾವು ಬದಿಗಿಟ್ಟಂತಾಗುತ್ತದೆ. ಅದಕ್ಕೋಸ್ಕರ, ನಾನು ಇದನ್ನು ಪ್ರಸ್ತಾಪ ಮಾಡಿದ್ದು. ಅದಕ್ಕೆ ಅವರು ಉತ್ತರ ಕೊಡಬೇಕೆಂದೇನೂ ಇಲ್ಲ. ಅನೇಕ ಸಲ ಯಾವ ರೀತಿಯಾಗಿ ನಡೆದಿದೆ? ಏನು ನಡೆದಿದೆಯೆಂದು ಗೊತ್ತಿದೆ. ಸುಪ್ರಿಂಕೋರ್ಟ್‌ನಲ್ಲಿ 2 ಸಲ ನಮ್ಮ petition

ಯಾವ ರೀತಿ ತಿರಸ್ಕೃತವಾಯಿತು? ಅದಕ್ಕೆ ಯಾರು ಕಾರಣರು? ಏನೆಂದು ನಾವು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಒಂದು ಮಾತನ್ನು ನಾನು ಸ್ಪಷ್ಟವಾಗಿ ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಸರ್ವ ಪಕ್ಷಗಳ ಸಭೆಯಾದ ನಂತರ ಒಂದು ತೀರ್ಮಾನ ತೆಗೆದುಕೊಂಡು ತದನಂತರ ನಾವು ಮುಂದಿನ ನಿರ್ಣಯ ಕೈಗೊಳ್ಳಬೇಕೆಂಬುದು ತೀರ್ಮಾನವಾದ ನಂತರ ಸರ್ವಾನುಮತದಿಂದ ಹೆಚ್ಚು ಕಡಿಮೆ ಬಂದರೂ ಕೂಡ ಸರ್ಕಾರ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಬೆಂಬಲ ನೀಡಿತು. ಸರ್ವ ಪಕ್ಷದವರು ಬೆಂಬಲ ನೀಡಿದರು. ಇವತ್ತು ಬಹಳ ಯಶಸ್ವಿಯಾಗಿ ಶಾಂತ ರೀತಿಯಿಂದ ಜನತೆ ಬಂದ್ ಆಚರಣೆ ಮಾಡಿದೆ. ಬೀದರ್‌ನಿಂದ ಕೋಲಾರದವರೆಗೆ ಮತ್ತು ಹಾಸನ, ಮಂಡ್ಯದಿಂದ ಬೆಳಗಾಂವರೆಗೆ ಎಲ್ಲರೂ ಕೂಡ ಸಹಕರಿಸಿದ್ದಾರೆ. ನಿಜವಾಗಿಯೂ, ಈ ಸದನದ ಮುಖಾಂತರ ಈ ರಾಜ್ಯದ ಜನತೆಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಎಲ್ಲಾ ಸಂಘಟನೆಗಳಿಗೂ ಕೂಡ ನಾನು ಅಭಿನಂದಿಸುತ್ತೇನೆ. ರೈತರಿಗೂ ಅಭಿನಂದಿಸುತ್ತೇನೆ. ಹಿಂದೆ ಬಂದ್ ಆದ ಸಮಯದಲ್ಲಿ ಎಷ್ಟೋ ಸಲ ಅನಾಹುತಗಳಾಗಿದ್ದನ್ನು ನಾವು ಕಣ್ಣಾರೆ ನೋಡಿದ್ದೇವೆ. ಆದರೆ ಈ ಸಲ ಆ ರೀತಿ ಆಗಿಲ್ಲ. ಈಗ ನಾನು ಇನ್ನೊಂದು ಮಾತು ಹೇಳಿದರೆ ನೀವು ಸಿಟ್ಟಿಗೆ ಬರುತ್ತೀರಿ. ಗದ್ದಲ ಮಾಡಿಸುವವರು ಅಧಿಕಾರದಲ್ಲಿ ಇದ್ದ ಮೇಲೆ ಗದ್ದಲ ಎಲ್ಲಿ ಆಗುತ್ತದೆ?

ಶ್ರೀ ಎಂ.ಪಿ.ಪ್ರಕಾಶ್: ಪಾಪ! ತಾವು ಅಭಿನಂದನೆ ಸಲ್ಲಿಸಿದಿರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಎಲ್ಲರದ್ದೂ ಎಂದು ಹೇಳುತ್ತಿದ್ದೇನೆ. ಅದಕ್ಕೋಸ್ಕರ, ಇಡೀ ರಾಜ್ಯಾದ್ಯಂತ ಶಾಂತ ವಾತಾವರಣದಲ್ಲಿ ಬಂದ್ ಆಯಿತು. ಅದಕ್ಕೋಸ್ಕರ, ನಿಜವಾಗಿಯೂ ಈ ಸದನ ಜನರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ. ನಾವೆಲ್ಲರೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಇದರಲ್ಲಿ ಎಲ್ಲರೂ ಸಹಕರಿಸಿದ್ದಾರೆ. ಪತ್ರಿಕಾ ಮಿತ್ರರು ಇರಬಹುದು, ಕನ್ನಡ ಪರ ಚಳವಳಿಗಾರರು ಇರಬಹುದು, ಎಲ್ಲಾ ಸಂಘಟನೆಗಳೂ ಸರ್ಕಾರ ಆದಿಯಾಗಿ, ವಿರೋಧ ಪಕ್ಷಗಳಾದಿಯಾಗಿ ಎಲ್ಲರೂ ಒಮ್ಮತದಿಂದ ಇದ್ದರೂ ಒಡಕಿನ ಮಾತನ್ನು ನೀವೇ ತರುತ್ತಿದ್ದೀರಲ್ಲ. ಈ ಒಡಕಿನ ಮಾತು ತರುವುದರಿಂದ ಇವತ್ತು ಏನಾಗಿದೆಯೆಂದರೆ, ನಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು

ಹೇಳಿ ತರಾತುರಿಯಲ್ಲಿ ಯಡಿಯೂರಪ್ಪನವರು ದೆಹಲಿಗೆ ಹೋಗಿ, ನಾವೇ Prime Minister ಭೇಟಿಗೆ date fix ಮಾಡುತ್ತೇವೆಂದು ಹೇಳಿದರು. ಹಾಗೆಯೇ, ರಾಷ್ಟ್ರಾಧ್ಯಕ್ಷರ ಭೇಟಿಗೂ date ಅನ್ನು fix ಮಾಡಿ ಕಾವೇರಿ ಬಗ್ಗೆ ಮಾತನಾಡುತ್ತೇವೆಂದು ಹೇಳಿಕೆ ಕೊಟ್ಟರು. ತಾವೂ ಕೂಡ ನಾನೂ ಹೋಗುತ್ತೇನೆಂದು ಒಂದು ಹೇಳಿಕೆ ಕೊಟ್ಟಿರಿ. ನಾನೇ ಹೋಗುತ್ತೇನೆ, ಅವರನ್ನು ಭೇಟಿಯಾಗುತ್ತೇನೆ ಎಂದರೆ, ಸರ್ವ ಪಕ್ಷಗಳ ಸಭೆ ಕರೆಯದೆ ನಮ್ಮೆಲ್ಲರ ಅಭಿಪ್ರಾಯಗಳನ್ನು ತೆಗೆದುಕೊಳದೇ, floor leaders ಕೂಡ ಕರೆಯದೇ ಮುಂದಿನ ಹೆಜ್ಜೆ ಏನು ಎನ್ನತಕ್ಕಂಥಾದ್ದನ್ನು ಕೂಡ ಗಣನೆಗೆ ತೆಗೆದುಕೊಳ್ಳದೇ ತಾವು ಈ ರೀತಿ ಏಕಪಕ್ಷೀಯವಾಗಿ ನಾವು ನಾಳೆ ಹೋಗುತ್ತೇ" ಎಂದರೆ, ನಾವೇನು ಮಾಡಬೇಕು? ನಾವು ಕೈಕಟ್ಟಿಕೊಂಡು ಕೂರಬೇಕೆ? ಅಥವಾ ನಾವು ಮೂಕಪ್ರೇಕ್ಷಕರಾಗಿ ಇರಬೇಕೇ? ನಾವೇನು ಮಾಡಬೇಕು ಹೇಳಿ? ಅಂದರೆ, ಈ ರೀತಿಯಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳುವಂತೆ ಮಾಡುವುದು, ಒಗ್ಗಟ್ಟಿನ ಪ್ರದರ್ಶನ ತೋರಿಸುತ್ತೇವೆಂದು ಹೇಳುವುದು, ನಮಗೆ ಒಗ್ಗಟ್ಟಿನ ಮಾತು ಹೇಳುವುದು, ರೈತರ ಪರವಾಗಿ ಮಾತು ಹೇಳುವವರು, ನೀವು ಪುನ: ಅದರೊಳಗೆ ರಾಜಕೀಯ ಮಾಡುವುದು, ಈ ರೀತಿಯಾಗಿ ಮಾಡಿದರೆ, ಅಧ್ಯಕ್ಷರೆ, ಯಾವ ರೀತಿಯಾಗಿ ರೈತರ ಹಿತ ಕಾಪಾಡುತ್ತೀರಿ ಎಂಬುದನ್ನು ತಾವೇ ಹೇಳಿ. ನನ್ನ ಜಾಗದಲ್ಲಿದ್ದರೆ, ತಾವು ಕೇಳಬೇಕು ಅಥವಾ ಏಕಾಏಕಿಯಾಗಿ decision ತೆಗೆದುಕೊಂಡು ನೀವು ಮಾಡಿದರೆ, ಇದು ಎಷ್ಟರ ಮಟ್ಟಿಗೆ ನ್ಯಾಯ? ದುರ್ದೈವದಿಂದ ನೀವು ಏನೇ ಹೇಳಿದರೂ ಕೂಡ ಅದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ. ಮತ್ತು ಇಂತಹ ಲೋಪಗಳ ಮಧ್ಯೆ ಇವತ್ತಿನ ದಿವಸ ಯಾವ ಪಕ್ಷವನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳದೇ ನಾವು ಏಕಾಏಕಿ ನಿರ್ಣಯಗಳನ್ನು ಮಾಡತಕ್ಕಂಥಾದ್ದು ಸರಿಯಲ್ಲ, ಸಮಂಜಸವೂ ಅಲ್ಲ. ಇದರಿಂದ ಒಡಕುಂಟಾಗುತ್ತದೆ. ನಾಳೆ ನೀವು ಒಂದು delegation ಹೋದರೆ, ನಾವೂ ಒಂದು delegation ಹೋಗಬೇಕು. ನೀವು ಹೇಳತಕ್ಕಂಥ ಮಾತಿಗೆ ನಾವು ಬೇರೆ ಹೋಗಿ, ಅದಕ್ಕೋಸ್ಕರ, ನಾವೂ ಕೂಡ ಬಂದಿದ್ದೇವೆಂದು ಹೇಳಬೇಕು. ಅಂದರೆ, ಏನರ್ಥ? You do not want to take all the leaders into confidence. ಮತ್ತು ಯಾವ political partyಗೆ ನೀವು ಮಾತು ಕೊಟ್ಟಿದ್ದೀರಿ, ಆ ಮಾತಿನ ಪ್ರಕಾರ ನಡೆದುಕೊಳ್ಳುತ್ತಿಲ್ಲ. ನಿಜವಾಗಿಯೂ ಇದೊಂದು

ದುರ್ದೈವ ಹಾಗೂ ದು:ಖಕರವಾದ ಸಂಗತಿ. ಈ ರೀತಿಯಾಗಿ ನೀವು ನಡೆದುಕೊಳ್ಳುವುದು, ಪುನ: ಇನ್ನೊಂದು ಪಕ್ಷಗಳ ಮೇಲೆ ಗೂಬೆ, Central Government ಮೇಲೆ ಗೂಬೆ ಕೂರಿಸುವುದು, tribunalನಲ್ಲಿ ಆದಂತ ನಿರ್ಣಯಗಳ ಬಗ್ಗೆ ಏನಾದರೊಂದು ನಮಗೆ ಹೇಳುವುದು ಅಥವಾ Supreme Courtನಲ್ಲಿ ಆದಂಥ ನಿರ್ಣಯಗಳಿಗೆ ಪಕ್ಷವನ್ನು ತಲೆ ಮೇಲೆ ಕಟ್ಟುವುದು, ಈ ರೀತಿಯಾಗಿ ಕ್ಷುಲ್ಲಕ ರಾಜಕಾರಣ ಮಾಡಿದರೆ ನಿಜವಾಗಿಯೂ ಇದು ಯಾರಿಗೂ ಶೋಭೆ ತರತಕ್ಕಂಥಾದ್ದಲ್ಲ. ಇದರಿಂದ ಪುನ: ರಾಜ್ಯದಲ್ಲಿ ವಾತಾವರಣ ಕೆಡಿಸತಕ್ಕಂಥಾದ್ದು ಆಗುತ್ತದೆಯೇ ಹೊರತು ತಿಳಿ ವಾತಾವರಣ ಇರುವುದಿಲ್ಲ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಯಾವ ಕಾರಣಕ್ಕಾಗಿ ಇಂತಹ ಒಂದು unilateral decision ಅನ್ನು ನೀವು ತೆಗೆದುಕೊಂಡಿದ್ದೀರಿ. ಉಪ ಮುಖ್ಯಮಂತ್ರಿಗಳು ನೀವು ತೀರ್ಮಾನ ತೆಗೆದುಕೊಂಡು, ಈ ಘೋಷಣೆ ಮಾಡಿದಿರಿ. ಯಾವ ಮಾತನ್ನು ಈ ಸದನದಲ್ಲಿ ಹೇಳಬೇಕು. ಯಾವ ಮಾತನ್ನು ಸರ್ವಪಕ್ಷದಲ್ಲಿ ಹೇಳಬೇಕು, ಯಾವ ಮಾತನ್ನು floor leaders ಗೂ ಹೇಳದೇ, ವಿರೋಧ ಪಕ್ಷದ ನಾಯಕರನ್ನು ಕರೆಯದೆ, ಹೇಳತಕ್ಕಂತದ್ದನ್ನು ಮಾಡಿದ್ದು, ನಿಜವಾಗಲೂ ಇದು ಅಕ್ಷಮ್ಯ ಅಪರಾಧ, ಇದು ಸರಿಯಲ್ಲ ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತೇನೆ. ಇದನ್ನು ನಾನು ಖಂಡಿಸುತ್ತೇನೆ. ಅದಕ್ಕೆ ಅವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಹೇಳುವುದು ಒಂದು ,ತೋರಿಸುವುದು ಒಂದು. ಮಾಡುವುದು ಒಂದು. ಕೊಡುವುದು ಒಂದು . ಹೇಳುವುದು ಒಂದು. ನಿಜವಾಗಲೂ ಇದನ್ನು ನಾನು ಖಂಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯ ಮಂತ್ರಿಗಳ ಪ್ರತಿಕ್ರಿಯೆ ಪತ್ರಿಕೆಗಳಲ್ಲಿ ಬಂದಿದೆ. ಪ್ರಪ್ರಥಮ ಬಾರಿಗೆ, ಅವರ ಪ್ರತಿಕ್ರಿಯೆ ಪತ್ರಿಕೆಯಲ್ಲಿ ಓದಿದೆ. ಸಂತೋಷ. ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ನಮ್ಮ ಉದ್ದೇಶವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪತ್ರಿಕೆಗಳಲ್ಲಿ ಬಂದಿರುವುದಕ್ಕೆ ನಮ್ಮ ಅಭಿಪ್ರಾಯ ಬೇರೆ ಇದೆ.

ಶ್ರೀ ವಾಟಾಳ್ ನಾಗರಾಜ್: ನಮ್ಮ ಮೇಲೆ ಬೀಳುತ್ತಿದ್ದಿರಲ್ಲ ಖರ್ಗೆ ಸಾಹೇಬರೇ, ನಾನು ಹೇಳುತ್ತಿದ್ದೇನೆ, ನಿಮ್ಮ ಮೇಲೆ ನಾನು ಏನೂ ಹೇಳಲಿಲ್ಲ.

ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೇವೆಂದು ಹೇಳಿದ್ದಾರೆ. ಒಂದು ಕಡೆ ಈಗಾಗಲೇ ಅವರು ಅದನ್ನೇ ಹೇಳಿದ್ದಾರೆ ಅದನ್ನೇ ನಾನು ಸಹ ಹೇಳುತ್ತಿದ್ದೇನೆ. ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೇವೆಂದು ಹೇಳಿದ್ದಾರೆ. ಸರ್ವ ಪಕ್ಷಗಳ ಸಭೆ ಇನ್ನೂ ಅಪೂರ್ಣ, ನನ್ನ ಪ್ರಕಾರ ಇದು ಇಷ್ಟು ನಿಧಾನ ಆಗಲೇಬಾರದಾಗಿತ್ತು. 5 ನೇ ತಾರೀಖು ನಮಗೆ ತೀರ್ಪು ಬಂತು. ಈಗ 13ನೇ ತಾರೀಖು ಆಗಿದೆ. ಇನ್ನೂ ನಾವು ಸ್ಪಷ್ಟವಾಗಿ ಏನು ಮಾಡಬೇಕು ಎನ್ನುವ ಒಂದು ಚಿತ್ರ ನಮ್ಮಲ್ಲಿ ಹೊರಗಡೆ ಬರಲೇ ಇಲ್ಲ. ಈ ಸದನದಲ್ಲಿಯಾದರೂ ಅದು ತೀರ್ಮಾನವಾಗಬೇಕಾಗಿತ್ತು. ಈ ಸದನದಲ್ಲಿ ನಾವು ಏನು ಮಾಡುತ್ತೇವೆ. 5ನೇ ತಾರೀಖು ತೀರ್ಪು ಬಂತು. ನಮಗೆ ಈ ತೀರ್ಪಿನಿಂದ ಆಗಿರತಕ್ಕಂತಹ ಅನಾನುಕೂಲಗಳು ಏನು? ರಾಜ್ಯಕ್ಕೆ ಆಗಿರತಕ್ಕಂತಹ ಅನ್ಯಾಯವೇನು ಎನ್ನುವುದರ ಬಗ್ಗೆ ಈಗಾಗಲೇ ಜನ ನಿನ್ನೆ ಇಡೀ ಒಕ್ಕೊರಲಿನಿಂದ ಪಕ್ಷ ಭೇದ ಮರೆತು ಯಾವುದೇ ಒಂದು ರೀತಿಯ ಅನಾಹುತವಾಗದೇ, ಇಡೀ ಸಮಗ್ರ ಕರ್ನಾಟಕವೇ, ನಿನ್ನೆ ಬಂದ್ ಮಾಡಿ ಸಂಪೂರ್ಣವಾಗಿ ಇಡೀ ರಾಜ್ಯ ಸರ್ಕಾರಕ್ಕೆ ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದಕ್ಕೆ. ನಾವು ತಯಾರಾಗಿದ್ದೇವೆ ಎನ್ನುವ ರೀತಿಯಲ್ಲಿ ಬೆಂಬಲವನ್ನು ಕೊಟ್ಟಿದ್ದಾರೆ. ಜೊತೆಗೆ ಆ ತೀರ್ಪು ಅನ್ಯಾಯವಾಗಿದೆ ಎನ್ನುವಂತದ್ದನ್ನು ಸ್ಪಷ್ಟವಾಗಿ ನೇರವಾಗಿ ವ್ಯಕ್ತಪಡಿಸಿದ್ದಾರೆ. ಅದರಲ್ಲೂ ಉತ್ತರ ಕರ್ನಾಟಕದ ಭಾಗದಲ್ಲಿ ಕೊಟ್ಟಂತಹ ಅಭೂತ ಪೂರ್ವವಾದಂತಹ ಸ್ವಾಗತಕ್ಕೆ. ನಿಜಕ್ಕೂ ನಾನು ಅಭಿನಂದಿಸುತ್ತೇನೆ. ಇದು ಬಹಳ ಒಳ್ಳೆಯ ಸೂಚನೆ. ಇದು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯ ಸೂಚನೆ ಎಂದು ನನಗನಿಸುತ್ತದೆ. ಕಾವೇರಿ ನ್ಯಾಯಮಂಡಳಿಯವರು ಈ ತೀರ್ಪನ್ನು ಕೊಟ್ಟಿದ್ದಾರೆ. ಅನೇಕರು ಇದನ್ನು ನೋಡಿದ್ದಾರೆ. ಅನೇಕರು ಇದನ್ನು ಅಭ್ಯಾಸ ಮಾಡಿದ್ದಾರೆ. ಈ ತೀರ್ಪು ನಿಜಕ್ಕೂ ನಮಗೆ ಮರಣಶಾಸನ. ಅದರಲ್ಲಿ ಎರಡನೇ ಮಾತು ಇಲ್ಲವೇ ಇಲ್ಲ. ನಮ್ಮ ರಕ್ಷಣೆಗೆ ಈಗ ಬರತಕ್ಕಂತಹವರು ಯಾರು ಎನ್ನತಕ್ಕಂತದ್ದು ಬಹಳ ಪ್ರಮುಖವಾದಂತಹ ಒಂದು ಅಂಶ, ನೀವು ಸರ್ವಪಕ್ಷಗಳು ಬೇಡ ಎನ್ನುವುದಾದರೆ ಅದು ತಮಗೆ ಸೇರಿದ್ದು. ಸರ್ವ ಪಕ್ಷಗಳ ಸಭೆ ಬೇಡವೆಂದರೆ ಅದು ತಮಗೆ ಸೇರಿದ್ದು. ನೀವು ಈಗ ಏನು ಹೊರಗಡೆ ಹೇಳಿದ್ದೀರಿ, ಆ ತೀರ್ಪನ್ನು ನಾವು ಒಪ್ಪುತ್ತೇವೆ ಅಥವಾ ತಿರಸ್ಕರಿಸುತ್ತೇವೆ

ಎನ್ನುವುದನ್ನು ಈ ಸದನದಲ್ಲಿ ಒಂದು ನಿರ್ಣಯದ ರೂಪದಲ್ಲಿಯಾದರೂ ತೆಗೆದುಕೊಂಡು ಬನ್ನಿ. ಅಥವಾ ಸದನದಲ್ಲಿ ನಮ್ಮ ಸರ್ಕಾರದ ನಿಲುವು ಇದು, ಸ್ಪಷ್ಟ ಅಂತ ಈಗ ನೀವು ಏನು ಹೊರಗಡೆ ಹೇಳಿದ್ದೀರಿ, ಈ ತೀರ್ಪು ಏನಿದೆ ಈ ಬಗ್ಗೆ ನಾವು ಪ್ರಧಾನಿಯವರ ಮೇಲೆ ಒತ್ತಡ ತರುತ್ತಿದ್ದೇವೆ, ಮತ್ತು ಒಂದು ಕಡೆ ತಾವು ಏನು ಹೇಳಿದ್ದೀರಿ ಸ್ಪಷ್ಟವಾಗಿ ಹೇಳಿದ್ದೀರಿ. ಪ್ರಧಾನಿಯವರನ್ನು ಭೇಟಿ ಮಾಡಿ ನ್ಯಾಯ್ಯಾಧೀಕರಣದ ತೀರ್ಪಿನಿಂದ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ವಿವರಿಸುವ ಪತ್ರವನ್ನು ಖುದ್ದಾಗಿ ಹಸ್ತಾಂತರಿಸಲಾಗುವುದು, ಎಂದು ಹೇಳಿದ್ದೀರಿ. ಏನು ಪತ್ರ? ಪತ್ರ ಬರೆಯತಕ್ಕಂತಹ ವಿಚಾರ ಏನು? ಅದಕ್ಕಿಂತ ಮೊದಲು ನಾವು ನಿಜವಾಗಿಯು ಎಲ್ಲರೂ ಪಕ್ಷಭೇದವಿಲ್ಲದೇ ಒಟ್ಟಾಗಿದ್ದೇವೆ, ಈ ರಾಜ್ಯದಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಇದ್ದೇವೆ ಎನ್ನುವುದನ್ನು ಮೊದಲು ತೋರಿಸತಕ್ಕಂತಹ ಕಾರ್ಯ ಆಗಬೇಕು. ಆದ್ದರಿಂದ ನಾವೆಲ್ಲರೂ ಯಾರೂ, ಯಾರ ಮೇಲೂ ಮಾತನಾಡದೇ "ನಿಮ್ಮಿಂದ ಆಯಿತು ನಿಮ್ಮ ಪಕ್ಷದಿಂದ ಆಯಿತು" ಎಂದು ಹೇಳುವುದು ಬೇಡ. ನಾವೆಲ್ಲಾ ಒಟ್ಟಾಗಿದ್ದೇವೆ. ನೀವು ಸರ್ವಪಕ್ಷಗಳ ನಿಯೋಗವನ್ನಾದರೂ ಕರೆದುಕೊಂಡು ಹೋಗಿ. ಅಥವಾ ನೀವಿಬ್ಬರೇ ಹೋಗಿ ತೀರ್ಮಾನ ಮಾಡಿಕೊಂಡು ಬನ್ನಿ. ನಮ್ಮ ಇಡೀ ರಾಜ್ಯದ ಸಮಸ್ಯೆಯನ್ನು ನೀವಿಬ್ಬರೇ ಬಗೆಹರಿಸಿಕೊಂಡು ಬಂದರೂ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಇದರಲ್ಲಿ ಯಾರು ಹೋಗಬೇಕು ನಾವು 15 ಜನ ಬರಬೇಕು ಎನ್ನತಕ್ಕಂತಹದ್ದು ಏನೂ ಇಲ್ಲ. ನೀವಿಬ್ಬರೇ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ನಮ್ಮ ರಾಜ್ಯಕ್ಕೆ ಆಗಿರುವ ಅನ್ಯಾಯಗಳ ಬಗ್ಗೆ ತಾವೇ ನೇರವಾಗಿ ಅದನ್ನು ತೀರ್ಮಾನ ಮಾಡಿಕೊಂಡು ಬಂದರೆ ಇಡೀ ರಾಜ್ಯದ ಜನತೆ ಸಂಪೂರ್ಣವಾಗಿ ಸ್ವಾಗತಿಸುತ್ತೇವೆ. ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಇವತ್ತು ಸರ್ವಪಕ್ಷಗಳ ಸಭೆಯನ್ನು ತಾವು ಕರೆಯುತ್ತೇವೆಂದು ಹೇಳಿದಿರಿ. ಒಂದು ವಾರದಲ್ಲಿ ಕರೆಯುತ್ತೇವೆಂದು ಹೇಳಿದಿರಿ. ಬೇಗನೆ ಕರೆಯಬೇಕು. ನಿಧಾನ ಮಾಡಿದಷ್ಟು ನಮಗೆ ಒಳ್ಳೆಯ ಸೂಚನೆಯಲ್ಲ. ನಿಧಾನ ಮಾಡಿದಷ್ಟು ನಮಗೆ ಒಳ್ಳೆಯದಾಗುತ್ತದೆ ಎನ್ನತಕ್ಕಂಥದ್ದು ಇಲ್ಲ. ಒಂದು ಮಾತು, ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ, ಸರ್ಕಾರದ ನಿಲುವನ್ನು ತಾವು ಸ್ಪಷ್ಟಪಡಿಸಿ. ಎರಡನೆಯದಾಗಿ ಈ ತೀರ್ಪನ್ನು ನಾವು ಸಾರಾಸಗಟಾಗಿ

ತಳ್ಳಿ ಹಾಕಿದ್ದೇವೆ ಎನ್ನತಕ್ಕಂತಹ ಧ್ವನಿ ಈ ಸದನದ ಮೂಲಕ ಇಡೀ ರಾಜ್ಯಕ್ಕೆ ಹೋದಾಗ ಅದಕ್ಕೆ ಒಂದು ಶಕ್ತಿ ಬರುತ್ತದೆ. ಆದ್ದರಿಂದಲೇ ಈ ಸದನದಲ್ಲಿ ಬೇರೆ ಎಲ್ಲವನ್ನೂ ಚರ್ಚೆ ಮಾಡುತ್ತಿದ್ದೇವೆ ಕಾವೇರಿ ಪ್ರಶ್ನೆಯನ್ನು ಚರ್ಚೆ ಮಾಡುತ್ತಿಲ್ಲ ಎನ್ನತಕ್ಕಂಥದ್ದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಆ ದೃಷ್ಟಿಯಿಂದ ಸರ್ಕಾರ ಮಾಡಬೇಕಾದಂತಹ ಮೊದಲನೇ ಕೆಲಸ ತಕ್ಷಣ ಒಂದು ಈ ತೀರ್ಪನ್ನು ನಾವು ಸಾರಾಸಗಟಾಗಿ ತಳ್ಳಿ ಹಾಕಿದ್ದೇವೆ. ಇದು ಕರ್ನಾಟಕದ ಪಾಲಿಗೆ ನಿಜಕ್ಕೂ ಅನ್ಯಾಯವಾಗಿದೆ. ಇದು ಕನ್ನಡಿಗರ ಪಾಲಿಗೆ ಮರಣಶಾಸನ ಎಂಬುದನ್ನು ಸ್ಪಷ್ಟವಾಗಿ ಹಾಗೂ ನೇರವಾಗಿ ಹೇಳಬೇಕು. ಈ ಸದನ ಒಂದು ನಿರ್ಣಯ ಮಾಡಬೇಕು. ಇಂತಹ ನಿರ್ಣಯಗಳು ಕಷ್ಟ ಬಂದಾಗ ನಾವು ಮಾಡಿದ್ದೇವೆ. ಅನೇಕ ಸಾರಿ ಮಾಡಿದ್ದೇವೆ. ಮಹಾಜನ್ ವರದಿ ಬಂದಾಗ ಎಷ್ಟು ನಿರ್ಣಯಗಳು ಇಲ್ಲಿ ಆಗಿದೆ. ಆದ್ದರಿಂದ ಈಗ ಈ ರಾಜ್ಯಕ್ಕೆ ಬೆಂಕಿ ಬಿದ್ದಿದೆ. ಅದರಲ್ಲಿ ಏನೂ ಅನುಮಾನವಿಲ್ಲ. ನನಗನಿಸುತ್ತದೆ ಈ ತೀರ್ಪಿನ ಬಗ್ಗೆ ಅನೇಕ ಜನ ಅಭ್ಯಾಸ ಮಾಡಿದ್ದಾರೆ. ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಈ ತೀರ್ಪಿನಿಂದ ನಮಗೆ ಸಂಪೂರ್ಣವಾಗಿ ಆನ್ಯಾಯ, ಆನ್ಯಾಯ, ಆ ದೃಷ್ಟಿಯಿಂದ ಸರ್ಕಾರ ಏನು ತಿರುವು ತೆಗೆದುಕೊಳ್ಳುತ್ತೀರಿ, ಅದನ್ನು ಒಂದು ನಿರ್ಣಯ ರೂಪದಲ್ಲಿ ಮಾಡಲೇಬೇಕು, ತಾವೆಲ್ಲರೂ ಒಕ್ಕೂರಲಿನಿಂದ ನಿರ್ಣಯ ಮಂಡಿಸದಿದ್ದರೆ ನಾವು ಮಂಡಿಸುತ್ತೇವೆ. ನಮಗಾದರೂ ಹೇಳಿ. ನಾವು ಮಂಡಿಸುತ್ತೇವೆ. ಯಾವುದಾದರೊಂದು ತೀರ್ಮಾನ ಮಾಡಿ ಅಥವಾ ಸದನವನ್ನು ಮುಂದಕ್ಕೆ ಹಾಕಿ, ನಾವೆಲ್ಲಾ ಒಳಗಡೆ ಕುಳಿತುಕೊಂಡು ಗೌಪ್ಯವಾಗಿ ಮಾತನಾಡಿ, ಯಾವ ರೀತಿ ನಿರ್ಣಯ ತರಬೇಕು ಎಂದು ಒಂದು ತೀರ್ಮಾನಕ್ಕೆ ಬನ್ನಿ. ನಾವಂತೂ ತಯಾರಾಗಿದ್ದೇವೆ. ತಾವು ಒಂದು ತೀರ್ಮಾನಕ್ಕೆ ಬರಬೇಕೆಂದು ನಾನು ತಮ್ಮಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ): ಕಾವೇರಿ ನೀರಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ಹೋರಾಟ ಏನಿದೆ ಆಥವಾ ರಾಜ್ಯದ ಹೋರಾಟ ಏನಿದೆ ಈ ಹೋರಾಟದಲ್ಲಿ ಇವತ್ತಿನವರೆಗೆ ರಾಜಕಾರಣವಾಗಿಲ್ಲ. ಅದು ಟ್ರಿಬ್ಯುನಲ್ ರಚನೆಯಾದಂತಹ ಸಂದರ್ಭವಿರಬಹುದು, ಅದಕ್ಕಿಂತ ಹಿಂದೆ 1970 ರಿಂದ ಇವತ್ತಿನವರೆಗೆ ಕರ್ನಾಟಕ ರಾಜ್ಯದಲ್ಲಿ ಈ ವಿಚಾರದಲ್ಲಿ ಯಾವುದೇ

ಪಕ್ಷ ಪಕ್ಷಭೇದ ನಡೆಯುವಂತಹ ಕೆಲಸ ಆಗಿಲ್ಲ. ನಾವೆಲ್ಲಾ ಒಗ್ಗಟ್ಟಿನಿಂದ, ಒಕ್ಕೊರಲಿನಿಂದ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಏಕೆಂದರೆ ಇದು ಬರೀ ಕಾವೇರಿ ಜಲಾನಯನ ಪ್ರದೇಶದ ಜನರಿಗೆ ಅಷ್ಟೇ ಸೀಮಿತವಲ್ಲ. ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ವಿಚಾರ. ಅದು ಆಗಲೇ ನಿನ್ನೆ ಬಂದಿದೆ. ಇಡೀ ರಾಜ್ಯದ ಜನತೆ ಸ್ಪಂದಿಸಿದ್ದಾರೆ. ಉತ್ತರ ಕರ್ನಾಟಕದಲ್ಲೂ ಸಹ. ಎಲ್ಲಾ ಜನರೂ ಸ್ಪಂದಿಸಿದ್ದಾರೆ. 27 ಜಿಲ್ಲೆಗಳಲ್ಲಿ ಸ್ಪಂದಿಸಿದ್ದಾರೆ. ಈ ಟ್ರಿಬ್ಯುನಲ್‌ನ ಐತೀರ್ಪಿನಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಇದರ ಬಗ್ಗೆ ಸರ್ವಸಮ್ಮತವಾಗಿ ಅನ್ಯಾಯವಾಗಿದೆ ಎಂದು ಎಲ್ಲರೂ ಹೇಳತಕ್ಕಂಥದ್ದು. ಕಾನೂನು ತಜ್ಞರು ಇರಬಹುದು. ರೈತ ಸಂಘಟನೆಗಳು ಇರಬಹುದು ಅಥವಾ ತಾಂತ್ರಿಕ ತಜ್ಞರು ಇರಬಹುದು ಇದರಲ್ಲಿ ಪರಿಣಿತಿ ಇರತಕ್ಕಂತಹವರು ಎಲ್ಲರೂ ಕೂಡ ಅನ್ಯಾಯವಾಗಿದೆ, ಘನ್ಯಾಯವಾಗಿದೆ ಎಂದು ಹೇಳಿರುವುದರ ಬಗ್ಗೆ ಎರಡನೇ ಮಾತು ಇಲ್ಲ. ಆದರೆ ಇವತ್ತು ಮುಖ್ಯಮಂತ್ರಿಗಳ ಒಂದು statement ನೋಡಿದ ಮೇಲೆ, ಇವರು ಏಕೆ ಈ ರೀತಿ ಹೇಳಿಕೆ ಕೊಟ್ಟಿದ್ದಾರೆಂದು ನನಗಂತೂ ಅರ್ಥವಾಗುತ್ತಿಲ್ಲ. ಅವತ್ತು ಸರ್ವಪಕ್ಷಗಳ ಸಭೆ ಕರೆದಿದ್ದರು. ಅಲ್ಲಿ ಏನೂ ವಿಚಾರ ಚರ್ಚೆಯಾಗಲಿಲ್ಲ. ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಆಗಲಿಲ್ಲ. ಅಲ್ಲಿ ನಾವು ಎತ್ತಿದಂತಹ ಕೆಲವು ಪ್ರಶ್ನೆಗಳಿಗೆ ಅಲ್ಲಿಗೆ ಬಂದಿದ್ದ ವಕೀಲರುಗಳು, ನಾರಿಮನ್‌ರವರು ಈ ರೀತಿ ಹೇಳಿದ್ದಾರೆ Judgment ಬಂದ ತಕ್ಷಣವೇ ಅವರು ಈ ತರಹ ಪ್ರತಿಕ್ರಿಯೆ ಕೊಟ್ಟಿದ್ದಾರೆ ಮತ್ತು ಕಾತರಕಿಯವರು ಈ ರೀತಿ ಹೇಳಿದ್ದಾರೆ. ಅಡ್ವೋಕೇಟ್ ಜನರಲ್ ಈ ತರಹ ಹೇಳಿದ್ದಾರೆ. ತತ್‌ಕ್ಷಣದಲ್ಲೇ ಅವರು ಈ ಹೇಳಿಕೆಗಳನ್ನು ಕೊಟ್ಟಿರುವುದನ್ನು ನೋಡಿದರೆ, Judgement ನಿಂದ ನಮಗೆ ಸಮಾಧಾನವಾಗಿದೆ ಅನ್ನತಕ್ಕಂಥ ಅಭಿಪ್ರಾಯ ಬರುವಂತಹ ರೀತಿಯಲ್ಲಿ ಅವರು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ ಎಂದು ನಾವು ಇದೇ ಸದನದಲ್ಲಿ ಪ್ರಸ್ತಾಪ ಮಾಡಿದೆವು. ನಾವು ಆ ರೀತಿ ಪ್ರಸ್ತಾಪ ಮಾಡಿದಾಗ, ಅದು ಅವರು ಕೊಟ್ಟಿರತಕ್ಕಂಥ ಹೇಳಿಕೆ, ಸರ್ಕಾರಕ್ಕೂ ಅದಕ್ಕೂ ಏನೇನೂ ಸಂಬಂಧವಿಲ್ಲವೆಂದು ಹೇಳಿದರು. ಅವತ್ತು ಸರ್ವ ಪಕ್ಷಗಳ ಸಭೆ ಕರೆದಿದ್ದಾಗಲೂ ಕೂಡ, 'ನಾನು ಅಲ್ಲೇ ಇದ್ದೆ, ನಾರಿಮನ್‌ರವರು ಆ ತರಹ ಹೇಳಲಿಲ್ಲ' ಎಂದು ಜವಳಿಯವರು ಹೇಳಿದರು. ನಾವು ಅವರು ಹೇಳಿದಂತಹ ಮಾತುಗಳನ್ನು ಅವತ್ತು ಒಪ್ಪಿಕೊಂಡೆವು. Advocate

Generalರವರಾದ ಉದಯ್ ಹೊಳ್ಳರವರೂ ಕೂಡ ಹೇಳುತ್ತಿದ್ದಾರೆ, ಜವಳಿಯವರೂ ಹೇಳುತ್ತಿದ್ದಾರೆ ಎಂದು ನಾವು ಅಂದು ಸುಮ್ಮನಾದೆವು. Judgement ಸಿಕ್ಕಿಲ್ಲ ಎಂಬ ಕಾರಣಕ್ಕಾಗಿ All Party Meeting ಅವತ್ತು ಮುಂದಕ್ಕೆ ಹೋಯಿತು. ಸಾರ್, Judgement ಅಷ್ಟೊತ್ತಿಗಾಗಲೇ ಜವಳಿಯವರ ಕೈಯಲ್ಲಿತ್ತು. ವಕೀಲರುಗಳ ಕೈಗೆ judgement copy ಬಂದಿತ್ತು. ಸರ್ಕಾರ Judgement copy ತೆಗೆದುಕೊಳ್ಳಲಿಕ್ಕೆ ಇಷ್ಟು ದಿನಗಳು ಕಾಯಬೇಕಾದಂತಹ ಅಗತ್ಯವಿರಲಿಲ್ಲ. Judgement copy ತೆಗೆದುಕೊಳ್ಳಲಿಕ್ಕೆ ಇಷ್ಟೊಂದು ದಿನಗಳು ಬೇಕಾಗಿರಲಿಲ್ಲ. ತತ್‌ಕ್ಷಣದಲ್ಲೇ ನೀವು All Party Meeting ಕರೆಯಬಹುದಾಗಿತ್ತು. All Party Meetingನಲ್ಲಿ ಎಲ್ಲಾ ಪಕ್ಷಗಳ floor leaderಗಳು ಮತ್ತು ಎಲ್ಲಾ ಪಕ್ಷದ ಮುಖಂಡರುಗಳ ಅಭಿಪ್ರಾಯಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಈ ಸನ್ನಿವೇಶದಲ್ಲಿ ಏನು ಮಾಡಬೇಕು? ಎಂಬ ಬಗ್ಗೆ ಒಂದು ನಿಲುವಿಗೆ ಇಡೀ ಸರ್ಕಾರ ಮತ್ತು ಎಲ್ಲಾ ವಿರೋಧ ಪಕ್ಷಗಳೂ ಕೂಡ ಬರಲಿಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಈಗ ಏನಾಗಿದೆ ಎಂದರೆ, UPA Government ಇದರಲ್ಲಿ intervene ಆಗಬೇಕು, 'The ball is in the court of UPA Government' ಎನ್ನುವಂತಹ ರೀತಿಯಲ್ಲಿ ಅಭಿಪ್ರಾಯ ಮೂಡಿಸಲಾಗುತ್ತಿದೆ. ಮತ್ತೆ ಕೆಲವು ಕಡೆ ಕಾಂಗ್ರೆಸ್ ಪಕ್ಷ ಇದಕ್ಕೆ ಹೊಣೆ ಎನ್ನತಕ್ಕಂಥ ರೀತಿಯ ಅಭಿಪ್ರಾಯ ಬರುತ್ತಿದೆ. ಈ ತರಹದ ಅಭಿಪ್ರಾಯವನ್ನು ಮೂಡಿಸಲಿಕ್ಕೆ ಪ್ರಯತ್ನಗಳು ಏನು ನಡೆಯುತ್ತಿವೆಯೋ, ಇದು ಸರಿಯಾದುದುದಲ್ಲ. ರಾಜ್ಯದ ಹಿತ ಕಾಪಾಡಲಿಕ್ಕೆ, ನಮ್ಮ ಜನರ ಹಿತ ಕಾಪಾಡಲಿಕ್ಕೆ, ಏನೇನು ನಿಲುವುಗಳನ್ನು ಸರ್ಕಾರ ತೆಗೆದುಕೊಳ್ಳುತ್ತಾರೆಯೋ, ಅದೆಲ್ಲವನ್ನೂ ಕೂಡ ಬೆಂಬಲಿಸಲಿಕ್ಕೆ ನಾವು ತಯಾರಾಗಿದ್ದೇವೆ. 'ನಾವು ತಯಾರಾಗಿದ್ದೇವೆ' ಎಂದು ಈಗಾಗಲೇ ಹೇಳಿದ್ದೇವೆ. ಎಲ್ಲಾ ಸಹಕಾರವನ್ನು ಈ ದಿಸೆಯಲ್ಲಿ ನಾವು ಕೊಡುತ್ತೇವೆ ಎಂದು ಹೇಳಿದ್ದೇವೆ. ಆದರೆ ಈಗ ಈ ತರಹದ ಒಡಕು ಶಬ್ದಗಳು ಬರುವುದು ಸರಿಯಲ್ಲ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಯಡಿಯೂರಪ್ಪನವರು, ನಾವಿಬ್ಬರೂ ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತಿದ್ದೇವೆ, ಅವರಿಗೆ ಒಂದು ಮನವಿ ಕೊಡುತ್ತೇವೆ, ಒತ್ತಡ ಹಾಕುತ್ತೇವೆ, ಈ judgement ಅನ್ನು notify ಆಗಬಾರದು ಎಂದು ಅವರಿಗೆ ಹೇಳುತ್ತೇವೆ ಎಂದಿದ್ದಾರೆ. All

Party Meeting ನಲ್ಲಿ ಇದೆಲ್ಲಾ ಚರ್ಚೆಯಾಗಬಹುದಾಗಿತ್ತಲ್ಲವೇ? ಎಲ್ಲಾ ಲೀಡರ್‌ಗಳನ್ನು ಒಟ್ಟಿಗೆ ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬಹುದಾಗಿತ್ತಲ್ಲವೇ? ಇದನ್ನು ನೋಡಿದರೆ ಇವರು ರಾಜಕೀಯ ಮಾಡುತ್ತಿದ್ದಾರೆ ಅನ್ನತಕ್ಕಂಥದ್ದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರಲ್ಲಿ ರಾಜಕೀಯ ಮಾಡುವುದರಿಂದ ಕರ್ನಾಟಕಕ್ಕೆ ಲಾಭವೇನಾದರೂ ಆಗುತ್ತದೆಯೇ? ನೀವು ಅವತ್ತು ಹೇಳಿದಿರಿ, ಮಾನ್ಯ ನೀರಾವರಿ ಮಂತ್ರಿಗಳೂ ಇಲ್ಲಿ ಹೇಳಿದರು, ಮಾನ್ಯ ಯಡಿಯೂರಪ್ಪನವರೂ ಸಹ ಹೇಳಿದರು. ನಾವು ತತ್‌ಕ್ಷಣಕ್ಕೆ Review Petition ಹಾಕುವುದಕ್ಕೆ ತೀರ್ಮಾನ ಮಾಡಿದ್ದೇವೆ ಎಂದು ಹೇಳಿದಿರಿ. ಕೇಂದ್ರದ ಜಲ ಸಂಪನ್ಮೂಲ ಮಂತ್ರಿಗಳೂ ಕೂಡ judgement ಅನ್ನು ಮೂರು ತಿಂಗಳವರೆಗೆ notify ಮಾಡಲಿಕ್ಕೆ ಅವಕಾಶವಿದೆ ಎಂದು ಹೇಳಿದ್ದರು. Inter-state Water Dispute Actನ Section 5[3] ಪ್ರಕಾರ ನಾವು Review Petition ಹಾಕಬಹುದು. ಅದಕ್ಕೆ ಅವಕಾಶವಿದೆ ಎಂಬುದು ಬಹಳ ಸ್ಪಷ್ಟವಾಗಿ ಕಾನೂನಿನಲ್ಲಿ ಕೂಡ ಇದೆ. Supreme Courtಗೆ ಹೋಗಲಿಕ್ಕೂ ಕೂಡ ಕಾನೂನಿನಲ್ಲಿ ಅವಕಾಶವಿದೆ. ಇಲ್ಲಿ Review Petition ಹಾಕುತ್ತೇವೆ ಎಂದು ಹೇಳಿ, ಇನ್ನೂ All Party Meeting ಕರೆಯದೇ, ನಾವು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೇವೆ, ನಾವು ಬೇರೆಯೇ ಹೋಗುತ್ತೇವೆ, ಭೇಟಿ ಮಾಡಿ ಒತ್ತಾಯ ಮಾಡುತ್ತೇವೆ ಎಂದರೆ, ಇವರ್ಯಾರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳಬಾರದು ಎನ್ನತಕ್ಕಂಥ ಭಾವನೆ ನಿಮಗೆ ಇದ್ದ ಹಾಗಿದೆ. ಇದು ಸರಿಯಾದಂತಹ ಕ್ರಮವಲ್ಲ. ಇದರಲ್ಲಿ ಯಾವುದೇ ಕಾರಣಕ್ಕೆ ರಾಜಕೀಯವಾದರೆ, ನಮಗೆ ನ್ಯಾಯ ಸಿಗಲಿಕ್ಕೆ ತೊಂದರೆಯಾಗುತ್ತದೆ. ಎಲ್ಲರೂ ಒಂದೇ voiceನಿಂದ, ಒಂದೇ ಒಕ್ಕೊರಲಿನಿಂದ ನಾವು ಇದನ್ನು ವಿರೋಧ ಮಾಡುತ್ತಿದ್ದೇವೆ. ಅನ್ಯಾಯವಾಗುತ್ತಿದೆ ಎನ್ನತಕ್ಕಂಥದ್ದು ಬಹಳ ಸ್ಪಷ್ಟವಾಗಿದೆ. ಇದು ಮೇಲ್ನೋಟಕ್ಕೇ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರೆ, ತಮಿಳುನಾಡಿನ ನೀರಿನ ಪಾಲು 419 ಟಿಎಂಸಿ ನೀರು ಇದೆ ಎಂದು ತೀರ್ಪಿನಲ್ಲಿದೆ. ನಾನು judgement ಅನ್ನು ಈಗ ತೆಗೆದು ಓದಲಿಕ್ಕೆ ಶುರು ಮಾಡಿದೆ. ಅದನ್ನು ಓದಲಿಕ್ಕೆ ಶುರು ಮಾಡಿದರೆ, ಕೇರಳಕ್ಕೆ ಕೊಟ್ಟಿರತಕ್ಕಂಥ 21 ಟಿಎಂಸಿ ನೀರೂ ಕೂಡ ಅಲ್ಲಿಗೇ ಹೋಗುತ್ತದೆ. ಅದನ್ನು ನಾವು ಕಬಿನಿಯಿಂದ ಅವರಿಗೆ ಬಿಡಬೇಕಾಗಿದೆ ಎಂದು ತೀರ್ಪಿನಲ್ಲಿದೆ. ಆ 21

ಟಿಎಂಸಿ ನೀರು ಕೂಡ ಅವರಿಗೇ ಹೋಗುತ್ತದೆ. Underground water ಕೂಡ ಅವರಿಗೇ ಉಳಿದುಕೊಂಡಿದೆ. ಆ ಎಲ್ಲಾ ನೀರನ್ನು ಇಟ್ಟುಕೊಳ್ಳಲಿಕ್ಕೆ ಅವರಿಗೆ ಜಾಗವಿಲ್ಲ. Assessor's Report ಕೊಟ್ಟಿರುವುದನ್ನೂ ಕೂಡ ನ್ಯಾಯ ಮಂಡಳಿ ಲೆಕ್ಕಕ್ಕೇ ತೆಗೆದುಕೊಂಡಿಲ್ಲ. Assessor's Reportನಲ್ಲಿ ಹೇಳಿರುವುದಕ್ಕಿಂತ ಅವರಿಗೆ ಹೆಚ್ಚಾಗಿ ಕೊಟ್ಟಿದ್ದಾರೆ. ನಮಗೆ ಹೇಳಿರುವುದಕ್ಕಿಂತ ಕಡಿಮೆ ಕೊಟ್ಟಿದ್ದಾರೆ. Assessor's Reportನಲ್ಲಿ 129 ಟಿಎಂಸಿ feet water ಅಂತರ್ಜಲದಲ್ಲಿ ಸಿಗುತ್ತದೆಂದು ಹೇಳಿದ್ದಾರೆ. ತಮಿಳುನಾಡಿನ ಸರ್ಕಾರವೇ ನಮ್ಮಲ್ಲಿ 40–50 ಟಿಎಂಸಿ ಅಂತರ್ಜಲ ಸಿಗುವುದು ಸತ್ಯ ಎಂದು ಒಪ್ಪಿಕೊಂಡಿದೆ. ಅಷ್ಟೊಂದು ನೀರು ನಮಗೆ ground waterನಿಂದ ಸಿಗುತ್ತದೆಂದು ಅವರೇ ಒಪ್ಪಿಕೊಂಡಿದ್ದಾರೆ. ಅದನ್ನೂ ಕೂಡ consider ಮಾಡಿಲ್ಲ. Environment Protection ಗೆಂದು 10 ಟಿಎಂಸಿ ನೀರು ಬೇರೆ ಅಲ್ಲಿಗೆ ಕೊಟ್ಟಿದ್ದಾರೆ. ಸಮುದ್ರಕ್ಕೆ ಹೋಗುವ seepage water ಎಂದು 4 ಟಿಎಂಸಿ ನೀರನ್ನೂ ಸಹ ಅವರಿಗೇ ಕೊಟ್ಟಿದ್ದಾರೆ. ಬಿಳಿಗೊಂಡ್ಲುವಿನಿಂದ ಮೆಟ್ಟೂರಿನವರೆಗೆ ಸಿಗುವ 25 ಟಿಎಂಸಿ ನೀರು ಸಹ ಅವರಿಗೇ ಸಿಗುತ್ತದೆ. ಕನಿಷ್ಟ ಅವರಿಗೆ 500–600 ಟಿಎಂಸಿ feet water ಅವರಿಗೆ ಹೋಗುತ್ತಿದೆ. ಇಷ್ಟು ದೊಡ್ಡ ಅನ್ಯಾಯವಾಗುತ್ತಿದೆ. ಇಷ್ಟೆಲ್ಲಾ ಇದ್ದರೂ, ಈಗ ಮಧ್ಯೆ All Party Meeting ಕರೆಯದೇ, ಅವರ ಜೊತೆಗೆ ಚರ್ಚೆ ಮಾಡದೆ, ಏಕಾಏಕಿ ನೀವೇ ನಿರ್ಧಾರ ತೆಗೆದುಕೊಂಡಿದ್ದೀರಿ. ಸರ್ಕಾರ ಮಾಡಲಿ, ಅದಕ್ಕೆ ನಮ್ಮದೇನು ತಕರಾರು ಇಲ್ಲ. ನೀವು ಮಾಡುವುದಕ್ಕೆ ನಮ್ಮ ತಕರಾರು ಇಲ್ಲ. ಆದರೆ ಇಲ್ಲಿಯವರೆಗೆ ನಡೆದುಕೊಂಡು ಬಂದಿರುವಂತೆ, ಎಲ್ಲಾ ಪಕ್ಷಗಳನ್ನೂ ಕೂಡ ಒಟ್ಟಿಗೆತೆಗೆದುಕೊಂಡು ಹೋಗತಕ್ಕಂಥ, ಅವರ ಅಭಿಪ್ರಾಯ ತೆಗೆದುಕೊಳ್ಳತಕ್ಕಂಥ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕಂಥ ಕೆಲಸವಾಗಿಲ್ಲ ಎನ್ನುವಂತಾದ್ದು ಬಹಳ ಮುಖ್ಯವಾದಂತಹ ವಿಚಾರ. ಹೀಗಿರುವಾಗ ನೀವು ಏಕೆ ಈ ತರಹದ ನಿಲುವನ್ನು ತೆಗೆದುಕೊಂಡಿದ್ದೀರಿ ಎಂಬುದು ಪ್ರಶ್ನಾರ್ಹವಾಗುತ್ತದೆ. ಈಗ ನೀವು ಹೋಗಿ ಭೇಟಿ ಮಾಡಿಕೊಂಡು ಬರುತ್ತೀರಿ ಎಂದಿಟ್ಟುಕೊಳ್ಳೋಣ. ನಿಮ್ಮ ಜೊತೆಗೆ All Party Leaders ಅನ್ನು ನೀವು ಕರೆದುಕೊಂಡು ಹೋಗುತ್ತೀರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಇಲ್ಲಿಯವರೆಗೆ ಅದರ ಬಗ್ಗೆ ನಮಗೆ ಗೊತ್ತಿಲ್ಲ. ಆದರೆ ನಾಳೆ ನಾವು ಸುಮ್ಮನೆ

ಕುಳಿತುಕೊಳ್ಳಲಿಕ್ಕಾಗುವುದಿಲ್ಲ. ನಾವು ಬೇರೆ ಹೋಗಬೇಕಾಗುತ್ತದೆ. ಕಾಂಗ್ರೆಸ್ ಪಕ್ಷ ಬೇರೆ ಹೋಗಬೇಕಾಗುತ್ತದೆ. ನಮ್ಮಲ್ಲೇ ನಾವು ಬೇರೆ ಬೇರೆ ದಾರಿ ಹಿಡಿದುಕೊಂಡು ಹೋಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಬೇರೆ ಬೇರೆ ದಾರಿ ಹಿಡಿಯತಕ್ಕಂಥದ್ದು ಆಗಬಾರದು. ಇನ್ನೊಬ್ಬರ ಮೇಲೆ ಕೆಸರು ಎರಚತಕ್ಕಂಥ ಕೆಲಸವಾಗಬಾರದು. ಆದ್ದರಿಂದ ಈ ರೀತಿ ಮಾಡತಕ್ಕಂಥದ್ದು ಸರಿಯಾದಂತಹ ಕ್ರಮವಲ್ಲ. ಇದರಿಂದ ರಾಜ್ಯಕ್ಕೆ ಒಳ್ಳೆಯದಾಗುತ್ತದೆಂದು ನಾನೇನೂ ಭಾವಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ಅವರ ನಿಲುವನ್ನು ಸ್ಪಷ್ಟಪಡಿಸಬೇಕು. ಇಲ್ಲಿಯವರೆಗೂ ಸರ್ಕಾರದ ನಿಲುವು ಸ್ಪಷ್ಟವಾಗಿ ಪ್ರಕಟಿಸಿಲ್ಲ. ಪತ್ರಿಕೆಗಳಲ್ಲಿ ಬಂದಿರುವುದನ್ನು ಬಿಟ್ಟರೆ, ಇಲ್ಲಿ ಸ್ಪಷ್ಟವಾಗಿ ಅದು ಪ್ರಕಟವಾಗಿಲ್ಲ. ನಾವು ಏನು ಮಾಡುತ್ತೇವೆ ಅನ್ನತಕ್ಕಂಥದ್ದನ್ನು ಸದನದಲ್ಲಿ ತಾವು ಹೇಳಿಲ್ಲ. ಈಗ ಸದನ ನಡೆಯುತ್ತಿದೆ. ಸದನ ನಡೆಯುವಾಗ ಹೊರಗಡೆ ಹೇಳಿಕೆಗಳನ್ನು ಕೊಡತಕ್ಕಂಥದ್ದು ಅಥವಾ ಹೀಗೇ ಮಾಡುತ್ತೇವೆ ಎಂದು ಹೇಳತಕ್ಕಂಥದ್ದು ಶೋಭೆ ತರತಕ್ಕಂಥದ್ದಲ್ಲ. ಈ ಬಗ್ಗೆ ಸದನದಲ್ಲಿ ಹೇಳಿಕೆಯಾಗಬೇಕು. ಸದನದಲ್ಲಿ ಆ ಬಗ್ಗೆ ಸ್ಪಷ್ಟಪಡಿಸಬೇಕು. ಆದರೆ ಈಗ ಅದು ಆ ರೀತಿ ಆಗಿಲ್ಲ. ಅದಕ್ಕೋಸ್ಕರವೇ ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಪತ್ರಿಕೆಗಳಲ್ಲಿ ಇದನ್ನೆಲ್ಲಾ ನೋಡಿದ ಮೇಲೆ ಆ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ. ಇದಲ್ಲದೆ ಈ ಬಗ್ಗೆ ಬೇರೆ ಬೇರೆ ಹೇಳಿಕೆಗಳೆಲ್ಲಾ ಬಂದಿವೆ. ನಾನು ಅವುಗಳನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದಿನಿಂದಲೂ. ಬೇರೆ ಬೇರೆ ಪ್ರಧಾನ ಮಂತ್ರಿಗಳಿದ್ದರು. ಮಾನ್ಯ ವಿ.ಪಿ.ಸಿಂಗ್‌ರವರ ಕಾಲದಲ್ಲಿ Tribunal constitute ಆಯಿತು. ನಂತರ ಅದಾದ ಮೇಲೆ Tribunal Interim Order ಬಂದ ಮೇಲೆ ಯಾರು ಪ್ರಧಾನ ಮಂತ್ರಿಗಳಿದ್ದರು ಎಂಬುದು ನಮಗೆ ಗೊತ್ತಿದೆ. ಬಿಜೆಪಿಯ ಪ್ರಧಾನ ಮಂತ್ರಿಗಳೂ ಕೂಡ ಇದ್ದರು, ಶ್ರೀಮಾನ್ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದರು, ಇವರಲ್ಲದೆ ಇತರ ಬೇರೆ ಬೇರೆಯವರೂ ಪ್ರಧಾನ ಮಂತ್ರಿಗಳಾಗಿದ್ದರು. ಎಲ್ಲರ ಕಾಲದಲ್ಲೂ ಕೂಡ ನಾವು Interim Order ಅನ್ನು obey ಮಾಡಿಕೊಂಡೇ ಬಂದಿದ್ದೇವೆ. ಈಗ 'The ball is in the court of UPA Government' ಎಂದು ಹೇಳತಕ್ಕದ್ದು ಇದೆಯಲ್ಲಾ, ಅದು ರಾಜಕೀಯ ದುರುದ್ದೇಶದಿಂದ ಹೇಳತಕ್ಕಂಥ ಮಾತುಗಳು ಎಂದು ನಾನು

ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಯಾವುದೇ ಕೇಂದ್ರ ಸರ್ಕಾರ ಇರಲಿ, ಯಾರೇ ಪ್ರಧಾನ ಮಂತ್ರಿಗಳಾಗಿರಲಿ, Supreme Court ಮೇಲೆ ಪ್ರಭಾವ ಬೀರುವುದಕ್ಕಾಗುತ್ತದೆಯೇ? Tribunal ಕೂಡ Supreme Courtನಷ್ಟೇ ಅಧಿಕಾರ ಇರತಕ್ಕದ್ದು. ಅವರ ಮೇಲೆ ಪ್ರಭಾವ ಬೀರುವುದಕ್ಕಾಗುತ್ತದೆಯೇ? It is a decree. It is as good as a decree of the Supreme Court ಎಂದು ಹೇಳುತ್ತಾರೆ. If such being the case, how can you throw the blame on UPA Government? Could anybody throw blame on UPA Government? ಆ ತರಹ ಹೇಳಿದರೆ it is politically motivated ಎಂದು ಹೇಳಬೇಕಾಗುತ್ತದೆ. ಆದ್ದರಿಂದ ನಾನು ಯಾವುದೇ ರಾಜಕೀಯ ಉದ್ದೇಶದಿಂದ ಇದನ್ನು ಪ್ರಸ್ತಾಪ ಮಾಡುತ್ತಿಲ್ಲ. ಈ ತರಹ ಕರ್ನಾಟಕದಲ್ಲಿ ಆಗಬಾರದು. ನಾವು ಕರ್ನಾಟಕದಲ್ಲಿ ಒಟ್ಟಿಗೆ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಮುಂದೆಯೂ ಕೂಡ ಎಲ್ಲಾ ಪಕ್ಷಗಳ, ಎಲ್ಲಾ ಭಾಗದ, ಎಲ್ಲಾ ವರ್ಗದ ಜನರೂ ಕೂಡ ಒಟ್ಟಿಗೆ ಹೋರಾಟ ಮಾಡಬೇಕಾಗುತ್ತದೆ. ಆದ್ದರಿಂದ ನಾವು ಇವತ್ತು ಈ ರೀತಿ ಬೇರೆ ಬೇರೆ voiceನಿಂದ ಮಾತನಾಡತಕ್ಕಂಥದ್ದು, ಬೇರೆ ಬೇರೆ ರೀತಿಯಲ್ಲಿ ಅಭಿಪ್ರಾಯಗಳನ್ನು ಹೇಳತಕ್ಕಂಥದ್ದು ಸರಿಯಾದುದಲ್ಲ. ನಾವೇನು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇವೋ, ಆ ದಾರಿಯಲ್ಲಿ ನಡೆದರೆ ಮಾತ್ರ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಈ ತರಹ ರಾಜಕೀಯ ಬೆರೆಸಿ ಅದರಲ್ಲಿ ಏನೋ ರಾಜಕೀಯ ಲಾಭ ಪಡೆಯತಕ್ಕಂತಹ ಪ್ರಯತ್ನಗಳು ಇದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎನತಕ್ಕಂತಹ ಮಾತನ್ನು ಹೇಳುತ್ತಾ ಆ ತರಹ ಮಾಡಬಾರದು ಸರ್ಕಾರದ ನಿಲುವುಗಳು ಆ ತರಹ ಇದ್ದರೆ ಅದನ್ನು ಬಿಡಬೇಕಾಗುತ್ತದೆ ಎಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಹೆಚ್ಚು ಚರ್ಚೆಯ ಅಗತ್ಯವಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೇ, ನಾವು ಮಾತನಾಡಲೇಬಾರದು ಎಂದು ಇದ್ದವರು. ಒಂದು ಎರಡು ಮೂರು ವಿಷಯಗಳನ್ನು ಹೇಳುತ್ತೇನೆ. ತೀರ್ಪಿನ ವಿರುದ್ಧ ರಿವ್ಯೂಗೆ provision ಇಲ್ಲ. ಮೊನ್ನೆ ನೆನ್ನೆಯವರೆಗೆ ನೀವು ಆ ಮಾಹಿತಿ ಕೊಡುವವರೆಗೆ ನಾವು ಹೆಚ್ಚಿಗೆ

ಮಾತನಾಡುತ್ತಿರಲಿಲ್ಲ. ಟ್ರಿಬ್ಯುನಲ್ ಮುಂದೆ ತಾವು explanation, clarification and guidance ಮಾತ್ರ seek ಮಾಡಬಹುದು ಎಂದು ಸ್ಪಷ್ಟವಾಗಿದೆ. ಹಿಂದೆ ನೀವು interim award ಮೇಲೆ ರಿವ್ಯೂ ಹೋದಾಗ ಕೂಡ ಅವರು ಸ್ಪಷ್ಟವಾಗಿ ತಳ್ಳಿ ಹಾಕಿದ್ದಾರೆ, "review petition ತೆಗೆದುಕೊಂಡು ನಮ್ಮ ಮುಂದೆ ಬರುವ ಅಗತ್ಯವಿರಲಿಲ್ಲ, law is very much clear ನಿಮಗೆ review ಕೇಳುವ ಅಧಿಕಾರ ಇಲ್ಲ, ನಾವೇನು 250 TMC ಬಿಡಿ ಎಂದು ಹೇಳಿದ್ದೇವೆ ಅದಕ್ಕೆ adhere ಆಗಿ" ಎಂದು ಹೇಳಿದರು. ಎರಡನೆಯದು ಸನ್ಮಾನ್ಯ ವಿ.ಪಿ. ಸಿಂಗ್‌ರವರ ಹೆಸರನ್ನು ನಾವು ಪದೇ ಪದೇ ಬಳಸುತ್ತಿದ್ದೇವೆ. It is not correct. Supreme Court ಗೆ ಹೋಗಿ Tamilnadu Government ನವರು Supreme Court direction ಮೇಲೆ Tribunal constitute ಆಗಿರುವುದು. Let the records be clear. Supreme Court ಆದೇಶ ಮಾಡಿ Supreme Courtನ ಆದೇಶದ ಮೇಲೆ Tribunal constitute ಮಾಡುವಂತಹ ಪರಿಸ್ಥಿತಿ ಕೇಂದ್ರ ಸರ್ಕಾರಕ್ಕೆ ಬಂದಿತ್ತು. Tribunal is constituted by an Act of Parliament . ಈಗ Supreme Court ಕೂಡ ನಿಮ್ಮ ರಿವಿಷನ್ ಪಿಟಿಷನ್ ಅಥವಾ ಅಪೀಲನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅವರ ಪಾಲು ಅದು ಕೋರ್ಟ್‌ನಲ್ಲಿದೆ ಎಂದು ಹೇಳುತ್ತೀರೋ ಇಲ್ಲವೆಂದು ಹೇಳುತ್ತೀರೋ? ರಾಜಕೀಯ ಇಚ್ಚಾಶಕ್ತಿಯನ್ನು ತಾವು ಇವತ್ತು ಪ್ರದರ್ಶನ ಮಾಡಲೇಬೇಕು. ಕರ್ನಾಟಕಕ್ಕೆ ಒಳ್ಳೆಯದಾಗಬೇಕೆಂದರೆ ರಾಜಕೀಯವಾಗಿ ನಾವು ಇವತ್ತು ಇಚ್ಚಾಶಕ್ತಿಯನ್ನು ಪ್ರಬಲವಾಗಿ ತೋರಿಸಬೇಕಾಗಿದೆ. ರಿವ್ಯೂ ಹಾಕುತ್ತೇವೆ, ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದರೆ, ಬಹುಶ: ನಾನು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಿದ ಪ್ರಕಾರ ನಮಗೆ ಬಹಳ ಸ್ಕೋಪ್ ಇದೆ ಎಂದು ಅನ್ನಿಸುವುದಿಲ್ಲ. Atleast ಸಣ್ಣ ಸಣ್ಣ ಲಾಯರ್‌ಗಳಾಗಿ ನಾವು ಹೇಳುತ್ತಿದ್ದೇವೆ, ನಾರಿಮನ್‌ರವರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ, ಅವರ arguments ಎಲ್ಲ ಓದಿದಾಗ Lawyers have done a wonderful work in this regard. ಆದರೆ ಅವರಿಗೂ ಒಂದು ಮಿತಿ ಇರುತ್ತದೆ. Material facts ಬಿಟ್ಟು ಮುಂದಕ್ಕೆ ಹೋಗುವುದಕ್ಕಾಗುವುದಿಲ್ಲ. ವಿಶ್ವೇಶ್ವರಯ್ಯನವರಾದರೆ ಅವತ್ತು ಅಲ್ಲಿ 12 ಲಕ್ಷ ಚಿಲ್ಲರೆ irrigation ಆಗುತ್ತಿತ್ತು,

ನಮ್ಮ ಹತ್ತಿರ 1 ಲಕ್ಷ 5,000 ಎಕರೆ irrigate ಆಗುತ್ತಿತ್ತು ಎಂದು ಹೇಳಿ ಅದರ ಮೇಲೆ 30% enhance ಮಾಡಿ ಎಂದು ಹೇಳಬಹುದಿತ್ತು, ನಾವು ಯಾರನ್ನೂ ಇವತ್ತು blame ಮಾಡುವುದು ಬೇಡ. ಇವತ್ತು ರಾಜ್ಯದ ಹಿತಾಸಕ್ತಿ ಮುಖ್ಯ ಎಲ್ಲರೂ ಒಂದಾಗಿ ಹೋಗಬೇಕು, ದಯಮಾಡಿ ಕಾವೇರಿ ವಿಷಯದಲ್ಲಿ ಕ್ಷುಲ್ಲಕ ರಾಜಕಾರಣವನ್ನು ಯಾರೂ ಮಾಡುವುದು ಬೇಡ. Most ಹೊಡೆತ ಬೀಳುತ್ತಿರುವುದು ನಮಗೆ. ಕೋಲಾರ, ತುಮಕೂರು, ಚಾಮರಾಜನಗರ ಈ ಭಾಗದಲ್ಲಿ ಏನು irrigation expansion ಆಗಬೇಕಾಗಿದೆ, ನಾವು sufferers ಆಗಿದ್ದೇವೆ. ನಮಗೆ ಅರ್ಥವಾಗಿಲ್ಲ. ನಮ್ಮ ರೈತರು ಅದರ ರುಚಿ ನೋಡಿಲ್ಲವೆಂದು ಇನ್ನು ನಮ್ಮ ರೈತರು ಮೇಲೆದ್ದಿಲ್ಲ. ಆ ಭಾಗದಿಂದ ಬರುವ MLA ಗಳು ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಒಂದು ದಿವಸ ನಾವು ಮೇಲೇಳಬೇಕಾಗುತ್ತದೆ. ಆ ಕಡೆ ನಾವು ನ್ಯಾಯ ಒದಗಿಸಲೇ ಬೇಕಾಗಿದೆ. 3–4 point ಮೇಲೆ ನೀವು ಅಥಾರಿಟಿ constitute ಮಾಡಿಸುವುದು ಅಥವಾ notification issue ಮಾಡುವುದಕ್ಕೆ ಮೊದಲೆ ಸನ್ಮಾನ್ಯ ಪ್ರಧಾನಿಗಳನ್ನು ಭೇಟಿ ಆಗಬೇಕು. ಅವರಿಗೆ convince ಮಾಡಬೇಕು. ಅನೇಕ ಕಡೆ ನಾವು ಮಾತನಾಡುವುದಕ್ಕೆ ಅವಕಾಶವಿದೆ. ಪ್ರಕಾಶ್‌ರವರೇ ಈ ಮೆರಿಟ್‌ಗಳನ್ನು ತೆಗೆದುಕೊಂಡು ಹೋಗಿ ಕುಳಿತು ಮಾತನಾಡುವುದಕ್ಕೆ ಅವಕಾಶವಿದೆ. ಆ ಮೆರಿಟ್ ಎಲ್ಲ ಇಲ್ಲಿ ಚರ್ಚೆ ಆಗುವುದು ಬೇಡ. ತಾವು ಹೋಗಿ ಬರುವುದರಿಂದ ನಮ್ಮದು ಯಾರದೂ ತಕರಾರು ಇಲ್ಲ. ಆದರೆ ಒಂದು ಮಾತನ್ನು ತಾವು ಸ್ವಲ್ಪ ಗಮನಿಸಬೇಕು. ಒಂದು ಸಭೆ ಕರೆದಿರಿ, ಆ ಸಭೆಯಲ್ಲಿ ಇರುವವರಿಗೆ ಹೇಳಿದಿರಿ, ಮತ್ತೊಂದು ಸಭೆ ಕರೆಯುತ್ತೇವೆ ಚರ್ಚೆ ಮಾಡುತ್ತೇವೆ, ಅಗತ್ಯ ಬಿದ್ದರೆ ಎಲ್ಲರೂ ಒಂದು ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಹೋಗೋಣ ಎಂದು ಹೇಳಿದಿರಿ, ಆ ಸಭೆಯನ್ನು ನೀವು ಅರ್ಧಕ್ಕೆ ನಿಲ್ಲಿಸಿ sudden ಆಗಿ ನೀವಿಬ್ಬರು ಹೋದರೆ, ಅದು ಸರಿಯಲ್ಲ. ನಾವು ಬರಬಹುದು, floor leaders ಅಥವಾ ಇಲ್ಲಿರುವ MLA ಗಳು ಬರಬಹುದು, ನಮಗೂ ಕೂಡ ಅದು ಅವಮಾನ ಮಾಡಿದ ಹಾಗಾಗುತ್ತದೆ. ನೀವು ಇನ್ನೊಂದು ಸಭೆ ಆದರೂ ಕರೆದು ಎಲ್ಲರೂ ಹೋಗುವ ಅಗತ್ಯವಿಲ್ಲ, ಸಭೆ ಅಭಿಪ್ರಾಯವೇನು, ನಾವು ಯಾವ ಲೈನ್‌ನಲ್ಲಿ ಅಲ್ಲಿ ಹೋಗಿ ಚರ್ಚೆ ಮಾಡಬೇಕು, ಯಾವ ಲೈನ್‌ನಲ್ಲಿ ನಾವು ಪ್ರಧಾನ ಮಂತ್ರಿಗಳ ಬಳಿ ಚರ್ಚೆ

ಮಾಡಬೇಕು, ಅದನ್ನಾದರೂ ಇಲ್ಲಿ ತೀರ್ಮಾನ ಮಾಡಿಕೊಂಡು ಇಲ್ಲಿಂದ ಹೋದರೆ ರಾಜ್ಯಕ್ಕೆ ಗೌರವ ಬರುತ್ತದೆ. ಕನಿಷ್ಟ ಸೌಜನ್ಯಕ್ಕಾದರೂ ತಾವು ಇನ್ನೊಮ್ಮೆ ಸರ್ವ ಪಕ್ಷಗಳ ಸಭೆಯನ್ನು ಕರೆಯಬೇಕು. ನಾವು ಅಲ್ಲಿ ಪ್ರಧಾನಿ ಮುಂದೆ ಹೋಗಿ ಏನು ಹೇಳಬೇಕು, ನಮ್ಮ argument ಹೇಗಿರಬೇಕು, ನಮ್ಮ ಬೇಡಿಕೆ ಏನಿರಬೇಕು ಅದಾದರೂ ಇಲ್ಲಿ ರಾಜ್ಯದ ಪರವಾಗಿ ಸ್ಪಷ್ಟವಾಗಬೇಕು. ನೀವು ಮಾನ್ಯ ಯಡಿಯೂರಪ್ಪನವರು ಹೋಗಿ ಏನು ಮಾತನಾಡುತ್ತೀರಿ ಎಂದು ನಮಗೆ ಗೊತ್ತಿಲ್ಲ. ನಾಳೆ ಇಡೀ blameನ್ನು ನೀವೇಕೆ ಮೈ ಮೇಲೆ ಹಾಕಿಕೊಳ್ಳುತ್ತೀರಿ ಎಂದು ನಮಗೆ ಅರ್ಥವಾಗುತ್ತಿಲ್ಲ. ಈಗ ನೀವಿಬ್ಬರೇ ಹೋಗುತ್ತೀರಿ, ಅಕಸ್ಮಾತ್ for heaven's sake ನೀವು ಫೇಲ್ ಆದಿರಿ, ಇದು ನೀವು ರಿಸ್ಕ್ ತೆಗೆದುಕೊಳ್ಳುತ್ತಿರುವುದು. ಸನ್ಮಾನ್ಯ ಮುಖ್ಯಮಂತ್ರಿಗಳೆ ಇಲ್ಲಿ ಪಣ ಬಹಳ ಜಾಸ್ತಿ ಇದೆ. ಈ issue ನಲ್ಲಿ ನೀವು ಹೀರೋ ಆದರೂ ಆಗಬಹುದು, ಜೀರೋ ಆದರೂ ಆಗಬಹುದು. ಹೀರೋ ಆದರೆ ಸಂತೋಷ. ಜೀರೋ ಆದರೆ ಕಷ್ಟ. ಎರಡೂ ಇರುವಂತಹ ಸ್ಟೇಕನ್ನು ನೀವು ತೆಗೆದುಕೊಳ್ಳುತ್ತಿದ್ದೀರಿ. ಇಂತಹ ಸನ್ನಿವೇಶದಲ್ಲಿ team spirit ನಲ್ಲಿ ಹೋಗಿ ಆಟ ಆಡುವುದು ಒಳ್ಳೆಯದು ಎಂದು ನಮ್ಮ ಭಾವನೆ. ನೀವು ಇನ್ನೊಂದು ಸಾರಿ ಆಲೋಚನೆ ಮಾಡಿ, ಇನ್ನೊಂದು ಡೇಟ್ ತೆಗೆದುಕೊಳ್ಳಿ. ಎಲ್ಲರನ್ನೂ ಕರೆದುಕೊಂಡು ಹೋಗುವುದರಿಂದ ಪ್ರಯೋಜನವಾಗುವುದಿಲ್ಲವೆಂದು ನಿಮ್ಮ ಭಾವನೆ ಆಗಿದ್ದರೆ, ಕನಿಷ್ಟ ಎಲ್ಲರನ್ನೂ ಕೂರಿಸಿಕೊಂಡು ಚರ್ಚೆ ಮಾಡಿ ಆ ಚರ್ಚೆಯ ಸಾರಾಂಶದ ಮೇಲಾದರೂ ನೀವು ಪ್ರಧಾನಿ ಬಳಿಗೆ ನಿಯೋಗ ತೆಗೆದುಕೊಂಡು ಹೋಗಬೇಕಾಗುತ್ತದೆ. ನೀವಿಬ್ಬರೇ ಹೋಗುವುದನ್ನು ನಾವು delegation ನಿಯೋಗ ಎಂದು ಕರೆಯುವುದಕ್ಕಾಗುವುದಿಲ್ಲ. It is your individual visit to the Prime Minister office. State ನ್ನು ನೀವು Represent ಮಾಡಿದ ಹಾಗಾಗುವುದಿಲ್ಲ. ನೀವು Government ಆಗಬಹುದು. ಸರ್ವ ಪಕ್ಷ ಅಥವಾ ರಾಜ್ಯದ delegation ಎಂದು ಕರೆಯುವುದಕ್ಕಾಗುವುದಿಲ್ಲ. ಅವರು ಮರು ಪರಿಶೀಲನೆ ಮಾಡಬೇಕು. ಮತ್ತೆ ನನ್ನದೊಂದು ಬೇಡಿಕೆ ಅಧ್ಯಕ್ಷರಲ್ಲಿ ಯಾವತ್ತಾದರೂ ಇದನ್ನು ಚರ್ಚೆ ಮಾಡಿ ಮುಗಿಸಿಬಿಡುವುದು ಒಳ್ಳೆಯದು. ಪ್ರತಿದಿನ ಪ್ರಶ್ನೋತ್ತರ ಮುಗಿದ ನಂತರ ಇದನ್ನು ತೆಗೆಕೊಳ್ಳುವುದು ಮಾತನಾಡುವುದು, ಕೆಲವರು ಮಾತನಾಡಿ ಕೆಲವರಿಗೆ

ಆಸಕ್ತಿ ಇಲ್ಲವೆಂದು ಅನ್ನಿಸಿಕೊಳ್ಳುವಂತಹ ಸ್ಥಿತಿ ನಿರ್ಮಾಣ ಮಾಡುವುದಕ್ಕಿಂತ ಒಂದು ದಿನ ಚರ್ಚೆ ಮಾಡಿಸಿ ಬಿಡಿ. ಏನಾಗುತ್ತದೆ ಆಗಿ ಬಿಡಲಿ. ನಿಲುವಳಿ ಪಾಸ್ ಮಾಡುತ್ತೀರೋ,ನಿರ್ಣಯ ಪಾಸ್ ಮಾಡುತ್ತೀರೋ, ಮಾಡಬಾರದ ನಿರ್ಣಯ ಮಾಡುತ್ತೀರೋ ಏನೋ ಒಂದು ಮಾಡಿ close ಮಾಡಿ ಬಿಟ್ಟಿದ್ದರೆ Assembly ನಡೆಯುವುದಕ್ಕೆ ಅನುಕೂಲವಾಗುತ್ತಿತ್ತು. ಅದಕ್ಕೆ ಎಲ್ಲಾದರೂ ತಾವು ಅವಕಾಶ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಬೇಕು. ಸರ್ವ ಪಕ್ಷಗಳ ಸಭೆಯನ್ನು ಅರ್ಧಕ್ಕೆ ನಿಲ್ಲಿಸಿದ್ದೀರಿ, ಪುಸ್ತಕವನ್ನು ಕೊಟ್ಟಿದ್ದೀರಿ, ನಾವೆಲ್ಲಾ ನೀವು ಮತ್ತೆ ಸಭೆ ಕರೆಯುತ್ತೀರಿ ಎಂದು ಓದಿಕೊಂಡಿದ್ದೇವೆ. ಸರ್ವ ಪಕ್ಷಗಳ ಸಭೆ ಕರೆದು ಯಾವ ಆಧಾರದ ಮೇಲೆ ತಾವು ಅಲ್ಲಿಗೆ ಹೋಗುತ್ತಿದ್ದೀರಿ ಎಂದು ನಿರ್ಣಯ ಮಾಡಿದ ಮೇಲೆ ತಾವು ಹೋಗುವುದು ಸೂಕ್ತ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಹಾಗೂ ಕೆಲವು ಹಿರಿಯ ಸದಸ್ಯರುಗಳು ಕಾವೇರಿ ತೀರ್ಪಿನ ಹಿನ್ನೆಲೆಯೊಳಗೆ ಕೆಲವು ವಿಷಯಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಹಾಗೂ ಈ ಒಂದು ಸದನದಲ್ಲಿ ಮಾತನಾಡಿದಂತಹ ಹಿರಿಯ ಸದಸ್ಯರುಗಳು ರಾಜಕೀಯವನ್ನು ಬೆರೆಸತಕ್ಕಂಥದ್ದು ಒಳ್ಳೆಯದಲ್ಲ ಎನ್ನುವ ಸಲಹೆ ಕೊಟ್ಟಿದ್ದಾರೆ, ನಾನು ನಿಜವಾಗಿಯೂ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಷಯದಲ್ಲಿ ರಾಜಕೀಯವನ್ನು ಬೆರೆಸಿ ಯಾವುದೇ ಪಕ್ಷಗಳು, ಯಾವುದೇ ವ್ಯಕ್ತಿಗಳು ಈ ಒಂದು ಸಂದರ್ಭವನ್ನು ಉಪಯೋಗ ಮಾಡಿಕೊಳ್ಳತಕ್ಕಂಥದ್ದಕ್ಕೆ ಹೋಗತಕ್ಕಂತಹ ಘಟನೆ ನಿಜವಾಗಿಯೂ ಯಾರಿಗೂ ಶೋಭೆ ತರತಕ್ಕಂತಹ ವಿಷಯ ಅಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಕಳೆದ 17 ವರ್ಷಗಳಿಂದ ನಡೆದಿರತಕ್ಕಂತಹ ಈ ಒಂದು ನ್ಯಾಯಾಧಿಕರಣದ ಅವಧಿಯಲ್ಲಿ ಈಗ ಏನು ತೀರ್ಪು ಬಂದಿದೆ, ಯಾರ್‍ಯಾರು ಯಾವ ಸಂದರ್ಭದಲ್ಲಿ ರಾಜಕೀಯ ಮಾಡಿದ್ದಾರೆ ಅದನ್ನು ನಾವು ಸದನದಲ್ಲಿ ಚರ್ಚೆ ಮಾಡುವುದು ಅನವಶ್ಯಕ. ಅಂತಹ ಒಂದು ಸಂದರ್ಭ ಬಂದಾಗ ನಾವು ಜನಗಳ ಮುಂದೆ ಪ್ರಸ್ತಾಪ ಮಾಡೋಣ. ನಾನು ಅದಕ್ಕೆ ಬೆಂಬಲ ವ್ಯಕ್ತಪಡಿಸುತ್ತೇನೆ. ಏಕೆಂದರೆ ಮಾನ್ಯ ವಿರೋಧ ಪಕ್ಷ ನಾಯಕರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸದನದ ಸದಸ್ಯರಲ್ಲದೇ

ಇರತಕ್ಕಂತಹ ಶ್ರೀ ದತ್ತರವರು ಇರಬಹುದು, ಮತ್ತು ಮಾನ್ಯ ದೇವೇಗೌಡರ ಬಗ್ಗೆ ಏನು ಚರ್ಚೆ ಮಾಡಿದ್ದಾರೆ, ಇವತ್ತು ಶ್ರೀ ದತ್ತರವರು ಆ ಹೇಳಿಕೆಯನ್ನು ಕೊಡಲು ಪ್ರೇರೇಪಣೆ ಆಗಿರತಕ್ಕಂಥದ್ದು, ಅವರ ಪಕ್ಷದ ಒಬ್ಬ ಹಿರಿಯ ಸದಸ್ಯರಾದ ಮಾನ್ಯ ದೇವೇಗೌಡರು ಏಕೆ ಮೌನವಾಗಿದ್ದಾರೆ, ಅವರು ಅವರ ವಿಷಯವನ್ನು ಸಾರ್ವಜನಿಕವಾಗಿ ಮಂಡನೆ ಮಾಡಬೇಕೆಂದು ವಿಷಯಕ್ಕೆ ಬಂದಾಗ ಆ ಒಂದು ಹಿನ್ನೆಲೆಯಲ್ಲಿ ಅವರು ಹೇಳಿರತಕ್ಕಂಥದ್ದು ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ. ಆ ವಿಷಯ ಪ್ರಸ್ತಾಪ ಆಗದೆ ಇದ್ದರೆ ಬಹುಶ: ಶ್ರೀ ದತ್ತರವರು ಹೇಳಿಕೆ ಕೊಡತಕ್ಕಂತಹ ಅವಶ್ಯಕತೆ ಬರುತ್ತಿರಲಿಲ್ಲವೆಂದು ನಾನು ಸ್ಪಷ್ಟೀಕರಣ ಕೊಡುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಸಿದ್ದರಾಮಯ್ಯನವರು ಇಲ್ಲಿ ರಾಜಕೀಯ ಬೆರೆಸುವುದು ಬೇಡವೆಂದು ಏನು ಹೇಳಿದ್ದಾರೆ ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಅವರು ಒಂದು ಮಾತನ್ನು ಮೊನ್ನೆ ಹೇಳಿದ್ದಾರೆ. ಇಷ್ಟು ದಿವಸಗಳಾದರೂ ಸರ್ಕಾರದ ನಿಲುವನ್ನು ಸ್ಪಷ್ಟ ಮಾಡದೇ ಇರುವಂತಹ ಸರ್ಕಾರ ಎಂದು ಹೊರಗಡೆ ಟೀಕೆ ಮಾಡಿದ್ದಾರೆ. ಅದನ್ನೂ ನಾನು ಗಮನಿಸಿದ್ದೇನೆ. ಇಷ್ಟೊತ್ತಿಗೆ ಸರ್ಕಾರ ಸ್ಪಷ್ಟನೆ ಮಾಡಬೇಕಾಗಿತ್ತು ಎಂದು ಹೇಳಿದ್ದಾರೆ. ನಾನು ಸರ್ವ ಪಕ್ಷಗಳ ಸಭೆಯನ್ನು ಕರೆದಂತಹ ಸಂದರ್ಭದಲ್ಲಿ ಕೊನೆಯದಾಗಿ ನಾನು ಮಾತನಾಡಬೇಕಾದರೆ ಸರ್ವ ಪಕ್ಷಗಳ ನಿಯೋಗವನ್ನು ನಾವು ಕೇಂದ್ರ ಸರ್ಕಾರದ ಮುಂದೆ ತೆಗೆದುಕೊಂಡು ಹೋಗುವುದು ಸೂಕ್ತ ಎಂದು ಹೇಳಿದಾಗ, ಅದು ಅನಾವಶ್ಯಕ ಅದು ಬೇಕಿಲ್ಲವೆಂದು ಹೇಳಿ ಆ ಸಭೆಯ ಸಂದರ್ಭದಲ್ಲಿ ಕೊನೆಯ ಹಂತದಲ್ಲಿ ಎಲ್ಲ ಸದಸ್ಯರುಗಳು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆ ನಂತರ ಸಭೆಯಲ್ಲಿ ಬಂದಂತಹ ತೀರ್ಮಾನ ತೀರ್ಪಿನ ಸಂಪೂರ್ಣ ಪ್ರತಿಗಳನ್ನು ನಮಗೆ ಸರಬರಾಜು ಮಾಡಿದ ನಂತರ ನಾವು ತೀರ್ಪಿನ ಪ್ರತಿಗಳನ್ನು ಸಂಪೂರ್ಣವಾಗಿ study ಮಾಡಲು ಅವಕಾಶ ಆಗಬೇಕು, ಮತ್ತೊಂದು ಬಾರಿ ಸರ್ವ ಪಕ್ಷಗಳ ಸಭೆ ಕರೆಯಬೇಕೆಂದು ಆ ಸಂದರ್ಭದಲ್ಲಿ ಹಲವಾರು ಜನ ಪ್ರಮುಖರು ಸಲಹೆ ಏನು ಕೊಟ್ಟಿದ್ದಾರೆ, ಆ ಸಲಹೆ ಮೇರೆಗೆ ಈಗಾಗಲೇ ಎಲ್ಲ ನೀರಾವರಿ ತಜ್ಞರುಗಳಿರಬಹುದು, ಹಿರಿಯ ಸರ್ವ ಪಕ್ಷಗಳ ಎಲ್ಲ ಮುಖಂಡರುಗಳು ಈ ಒಂದು ಪ್ರತಿಯನ್ನು ಈಗ ಬಳಸಿದ್ದೇವೆ, ನಾನು ನೆನ್ನೆ 22ನೇ ತಾರೀಕಿನ ಒಳಗಾಗಿ ಸರ್ವ ಪಕ್ಷಗಳ ಸಭೆಯನ್ನು ಕರೆಯುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೇವೆ. ನಾನು ಪ್ರಧಾನ

ಮಂತ್ರಿಗಳನ್ನು ಭೇಟಿ ಮಾಡುತ್ತೇವೆ ಎಂದು ಹೇಳಿರತಕ್ಕಂಥದ್ದರ ಹಿನ್ನೆಲೆ, ಸಂಸತ್ತಿನ ಅಧಿವೇಶನ ನಡೆಯುತ್ತಿರತಕ್ಕಂತಹ ಸಂದರ್ಭದಲ್ಲಿ ರಾಜ್ಯದ ಹಲವಾರು ಯೋಜನೆಗಳು, ಕೇಂದ್ರ ಸರ್ಕಾರದ ಹಲವಾರು ಇಲಾಖೆಗಳ ಮುಂದೆ ಏನು ಪ್ರಸ್ತಾವನೆಗಳನ್ನು ಕೊಟ್ಟಿದ್ದೇವೆ, ಆ ಪ್ರಸ್ತಾವನೆಗಳನ್ನು ಅನುಷ್ಠಾನಕ್ಕೆ ತರತಕ್ಕಂಥದ್ದರ ಬಗ್ಗೆ ಕೆಲವು ಕೇಂದ್ರ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳಿಗೆ ಭೇಟಿ ಮಾಡುವುದಕ್ಕೆ ಸಮಯವನ್ನು ಕೇಳಿದ್ದೇವೆ, ನಾಳೆ ಪ್ರಧಾನ ಮಂತ್ರಿಗಳು ಸಮಯವನ್ನು ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಕೇಂದ್ರದ ಯೋಜನೆಗಳ ವಿಷಯದಲ್ಲಿ ರೈಲ್ವೆ ಸಚಿವರಿರಬಹುದು, ಚವಿಮಾನಯಾನ ಸಚಿವರಿರಬಹುದು, ಹಾಗೆಯೇ ಭೂ ಸಾರಿಗೆ ಸಚಿವರು ಹೀಗೆ ಹಲವಾರು ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳ ವೇಳೆಯನ್ನು ಕೇಳಿದ್ದೆವು, ಆ ಒಂದು ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳು ನಾಳೆ ಭೇಟಿಗೆ ಏನು ಅವಕಾಶ ಕೊಟ್ಟಿದ್ದರು ಆ ಸಂದರ್ಭದಲ್ಲಿ ನಾನು ಮಾತನಾಡುತ್ತೇನೆ ಎಂದು ಹೇಳಿರತಕ್ಕಂಥದ್ದು ನಿಜ. ಸರ್ವ ಪಕ್ಷಗಳ ಸಭೆಯನ್ನು ಕರೆದು ಸರ್ವ ಪಕ್ಷಗಳ ನಾಯಕರು ಏನು ತೀರ್ಮಾನ ಕೊಡುತ್ತಾರೆ ಅದರ ಆಧಾರದ ಮೇಲೆ ನಾನು ಮುಂದಿನ ಹೆಜ್ಜೆಯನ್ನು ಇಡುತ್ತೇನೆ ಎನ್ನುವ ಮಾತನ್ನು ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಇದರಲ್ಲಿ ಯಾವುದೇ ರೀತಿಯ ರಾಜಕೀಯ ಬೆರೆಸುವುದಾಗಲಿ,ಇವತ್ತು UPA ಸರ್ಕಾರ ಎನ್ನುವ ಪ್ರಶ್ನೆ ಇಲ್ಲ. ಕೇಂದ್ರ ಸರ್ಕಾರದ ಮುಂದೆ ನಮ್ಮ ರಾಜ್ಯ ಸರ್ಕಾರದ ಈ ಒಂದು ಭಾರತದ ಒಕ್ಕೂಟದ ವ್ಯವಸ್ಥೆಯೊಳಗೆ ನಾವು ಕೇಂದ್ರ ಸರ್ಕಾರದ ಮುಂದೆ ಕೆಲವು ಅಹವಾಲುಗಳನ್ನು ಇಡಬೇಕಾಗುತ್ತದೆ. ಆ ದೃಷ್ಟಿಯಿಂದ ಇದರಲ್ಲಿ ಯಾವುದೇ ಒಂದು ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವಂಥದಕ್ಕೆ ರಾಜಕೀಯವಾಗಿ ಇದನ್ನು ಬಳಸುವುದಕ್ಕೆ ಹೊರಟಿದ್ದಾರೆ ಎನ್ನುವಂಥ ಒಂದು ಆತಂಕ ಸದನದಲ್ಲಿ ಯಾವ ಸದಸ್ಯರಿಗೂ ಬೇಡ. ಇದರಲ್ಲಿ ಯಾವುದೇ ಒಂದು ರಾಜಕೀಯ ಪಕ್ಷಗಳ ವಿರುದ್ಧವಾಗಿ ನಾನು ಇವೊತ್ತು ಆರೋಪ ಹೊರಿಸುವಂಥದ್ದಾಗಲಿ, ಯಾವುದೇ ಒಂದು ಪಕ್ಷಗಳು ಇದನ್ನು ಆ ಪಕ್ಷಗಳ ಸಂಘಟನೆಗೆ ಉಪಯೋಗ ಮಾಡಿಕೊಳ್ಳತಕ್ಕಂಥದ್ದಾಗಲೀ ಸರಿಯಲ್ಲ, ಈ ರೀತಿಯ ನಡವಳಿಕೆಯಿಂದ ರಾಜ್ಯದ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ. • ರೈತರ ಪಾಲಿಗೆ ಈ ತೀರ್ಪು ಇವೊತ್ತು ಜೀವನ್ಮರಣದ ಪ್ರಶ್ನೆಯಾಗಿದೆ ಎನ್ನುವುದು ಇವೊತ್ತು ನಮ್ಮ

ಮುಂದೆ ಇದೆ. ಇದು ನಮ್ಮ ರಾಜ್ಯದ ರೈತರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಉಪಯೋಗವಾಗುವುದಿಲ್ಲ. ಆ ದೃಷ್ಟಿಯಿಂದ ಇದರಲ್ಲಿ ರಾಜಕೀಯವನ್ನು ಬೆರೆಸತಕ್ಕಂಥದ್ದಕ್ಕೆ ಯಾವುದೇ ಕಾರಣಕ್ಕೂ ಅವಕಾಶವನ್ನು ಕೊಡತಕ್ಕಂಥದ್ದು ಅನವಶ್ಯಕವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ನಿನ್ನೆ ಕರೆದಂಥ ಬಂದ್ ಏನಿದೆ ಇದು ನಮ್ಮ ರಾಜ್ಯದ ಜನ ಇವೊತ್ತು ಈ ರಾಜ್ಯದ ಜನರಿಗೆ ತೀರ್ಪಿನ ಬಗ್ಗೆ ಇರತಕ್ಕಂಥ ಭಾವನೆಗಳು ಏನು ಎನ್ನುವುದನ್ನು ಕೇಂದ್ರ ಸರ್ಕಾರಕ್ಕಿರಬಹುದು, ಅಥವಾ ಇವೊತ್ತು ಇಡೀ ರಾಷ್ಟ್ರಕ್ಕೆ ಬಂದ್ ಮುಖಾಂತರ ಒಂದು ಸಂದೇಶವನ್ನು ಕೊಟ್ಟಿದ್ದಾರೆ, ಈ ಬಂದ್‌ನ್ನು ಶಾಂತಿಯುತವಾಗಿ ಆಚರಣೆ ಮಾಡತಕ್ಕಂಥದ್ದರಲ್ಲಿ ಹಲವಾರು ಸಂಘಟನೆಗಳು ಹಾಗೂ ಹಲವಾರು ಪಕ್ಷಗಳು ಒಕ್ಕೊರಲಿನ ಬೆಂಬಲವನ್ನೇನು ನಿನ್ನೆ ವ್ಯಕ್ತಪಡಿಸಿದ್ದಾರೆ ಅದಕ್ಕೆ ಸಂಪೂರ್ಣವಾಗಿ ನಾನು ಸರ್ಕಾರದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಷಯದಲ್ಲಿ ಸರ್ವ ಪಕ್ಷಗಳ ಸಭೆಯನ್ನು ಕರೆದ ನಂತರವೇ ನಾನು ಅಂತಿಮವಾಗಿ ಈ ಒಂದು ತೀರ್ಪಿನ ಹಿನ್ನಲೆಯೊಳಗೆ ಯಾವ ರೀತಿಯ ಹೆಜ್ಜೆಯನ್ನು ಇಡಬೇಕೆಂಬುದರ ಬಗ್ಗೆ ಸರ್ಕಾರ ತೀರ್ಮಾನವನ್ನು ಕೈಗೊಳ್ಳುತ್ತದೆ ಎಂದು ಈ ಸದನದ ಮುಂದೆ ನಾನು ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಸರ್ವ ಪಕ್ಷಗಳ ಸಭೆಯನ್ನು ಯಾವಾಗ ಕರೆಯುತ್ತೀರಿ ಎನ್ನುವುದರ ಬಗ್ಗೆ ನಿಮ್ಮ ಸ್ಪಷ್ಟನೆಯನ್ನು ಸದನದಲ್ಲಿ ಹೇಳಲೇ ಇಲ್ಲ. ನೀವು ಸರ್ವ ಪಕ್ಷಗಳ ಸಭೆ ಕರೆಯಿರಿ. ಆದರೆ ಸರ್ವ ಪಕ್ಷಗಳ ಸಭೆಗಿಂತ ಈ ಸದನ ಬಹಳ ಪ್ರಾಮುಖ್ಯವಾದುದು.

ಮಾನ್ಯ ಮುಖ್ಯಮಂತ್ರಿಗಳು: 22ನೇ ತಾರೀಖಿನೊಳಗೆ. . . .

ಶ್ರೀ ವಾಟಾಳ್ ನಾಗರಾಜ್: ಸರ್ವ ಪಕ್ಷಗಳ ಸಭೆಗಿಂತ ಈ ಸದನ ಬಹಳ ಪ್ರಾಮುಖ್ಯ. ತಮಗೆ ನಾನು ಹೇಳುತ್ತಿದ್ದೇನೆ. ತಾವು ಈ ಸದನದಲ್ಲಿ ತಮ್ಮ ಸರ್ಕಾರದ ನಿಲುವೇನು ಎಂಬ ಬಗ್ಗೆ ಹೇಳಬೇಕಾಗಿತ್ತು. ಸರ್ವ ಪಕ್ಷಗಳ ಸಭೆಗಿಂತ ಈ ಸದನ ಬಹಳ ಪ್ರಾಮುಖ್ಯ. ನಾನು ಅದನ್ನೇ ಮೊದಲಿನಿಂದಲೂ ಹೇಳುತ್ತಿದ್ದೇನೆ. ನೀವು ಅದನ್ನು ಸ್ಪಷ್ಟಪಡಿಸಲಿಲ್ಲ. ಆದುದರಿಂದ ನನಗೆ ನಿಜವಾಗಿಯೂ ನೋವಾಗಿದೆ. ನಾನು ಇವೊತ್ತೂ ಕೂಡ ಬಹಿಷ್ಕಾರ ಮಾಡಿ ಹೊರಗಡೆ ಹೋಗುತ್ತಿದ್ದೇನೆ.

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರೆ, ಇದೇನು ಇಷ್ಟೊಂದು ಬಹಿಷ್ಕಾರ ಹಾಕುತ್ತಿದ್ದೀರಲ್ಲ, ಪ್ರತಿ ದಿನ ನೀವು ಸದನಕ್ಕೆ ಬಂದು ಇದನ್ನೇ ಅಭ್ಯಾಸ ಮಾಡಿಕೊಂಡುಬಿಡುತ್ತೀರಿ. ಇದು ಬಹಳ ಕೆಟ್ಟದ್ದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಸಮಗ್ರವಾಗಿ ಕಾವೇರಿ ಬಗ್ಗೆ ಸಂಪೂರ್ಣವಾಗಿ ಚರ್ಚೆಯನ್ನಾದರೂ ಮಾಡಿ ಏನಾದರೂ ಒಂದು ತೀರ್ಮಾನಕ್ಕೆ ಬನ್ನಿ. ಆ ರೀತಿ ತೀರ್ಮಾನಕ್ಕೆ ನೀವು ಬರುತ್ತಿಲ್ಲ.

ಅಧ್ಯಕ್ಷರು: ಅದು ಸರಿ. ನೀವು ಏನು ಹೇಳಬೇಕೋ ಅದನ್ನು ನೀವು ಹೇಳಿ. ಅದನ್ನು ಬಿಟ್ಟು ಸದನಕ್ಕೆ ಬಹಿಷ್ಕಾರ ಹಾಕಿ ಹೊರಗೆ ಹೋಗುವುದನ್ನು ಅಭ್ಯಾಸ ಮಾಡಿಕೊಳ್ಳಬೇಡಿ. ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಈ ರೀತಿ ಇರತಕ್ಕಂಥದ್ದೂ ಕೂಡ ನನಗೂ ಶೋಭೆಯೇನೂ ಅಲ್ಲ. ಆದರೆ ನನಗೆ ಬಹಳ ನೋವಾಗುತ್ತಿದೆ. ನಿನ್ನೆ ದಿವಸ ಇಡೀ ರಾಜ್ಯದ ಜನತೆ ಬಂದ್ ಮಾಡಿದ್ದಾರೆ. ಸರ್ಕಾರದ ಮೇಲೆ ಅದರ ಪರಿಣಾಮವೇನು? ಅವರು ಸರ್ವ ಪಕ್ಷಗಳ ಸಭೆ ಯಾವತ್ತು ಎಂಬ ಬಗ್ಗೆ ಸರಿಯಾಗಿ ಹೇಳಲೇ ಇಲ್ಲ.

ಅಧ್ಯಕ್ಷರು: ಅವರು ಹೇಳುತ್ತಾರೆ, ನೀವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ನೀವು ನಿರ್ಣಯ ಮಾಡುವವರೆಗೂ ನಾನು ಬರುತ್ತೇನೆ, ಸದನವನ್ನು ಬಹಿಷ್ಕಾರ ಹಾಕಿ ನಾನು ಹೊರಗೆ ಹೋಗುತ್ತೇನೆ.

(ಶ್ರೀ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿ ಸದನದಿಂದ ನಿರ್ಗಮಿಸಿದರು)

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕಾವೇರಿ ಬಗ್ಗೆ ಚರ್ಚೆ ಮಾಡಲು ಬುಧವಾರದ ದಿವಸ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ಹೋಗುತ್ತಾರೆಂದು ಪತ್ರಿಕೆಗಳಲ್ಲಿ ಬಂದಿದೆ. ತಾವು ಮುಖ್ಯಮಂತ್ರಿಗಳಾಗಿ ಪ್ರಧಾನ ಮಂತ್ರಿಗಳನ್ನು ಬೇಟಿಯಾಗುತ್ತೀರಿ.

ಶ್ರೀ ಸಿದ್ದರಾಮಯ್ಯ: ಕಾವೇರಿ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಮನವಿಯನ್ನು ಮುಖ್ಯಮಂತ್ರಿಗಳು ಸಲ್ಲಿಸುತ್ತಾರೆಂದೂ ಪತ್ರಿಕೆಗಳಲ್ಲಿ ಬಂದಿದೆ. ಪ್ರಧಾನ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸುತ್ತೇನೆಂದು ಅವರು ಕೂಡ ಹೇಳಿದ್ದಾರೆ. ಆದರೆ ಇದಕ್ಕೂ ಮೊದಲು ಎಲ್ಲಾ ಪಕ್ಷಗಳ ಜೊತೆ ಅವರು ಚರ್ಚೆಯನ್ನೇ ಮಾಡಿಲ್ಲ. ಅವರು ಏನು ಮನವಿಯನ್ನು ಬರೆದಿದ್ದಾರೆ ಎಂಬ ಬಗ್ಗೆ ಚರ್ಚೆಯನ್ನೇ ಮಾಡಿಲ್ಲ. ಅವರು ನಮ್ಮನ್ನು ಕೇಳುವುದೇ ಇಲ್ಲವೆಂದು ಹೇಳಿದರೆ We have no objection, ಮಾಡಿಕೊಳ್ಳಲಿ. But ಮನವಿ ಸಲ್ಲಿಸುತ್ತೇವೆ, written ಮನವಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ.

(ಆ) ವಿಧಾನ ಪರಿಷತ್ತಿನ ಸಭಾಪತಿಯವರ ಚುನಾವಣೆ ಬಗ್ಗೆ

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಸಭೆಯಲ್ಲಿ ಈ ಪ್ರಶ್ನೆಗಳನ್ನು ಕೇಳದೇ ಹೋದರೆ ಅದೇ ತರಹ ಹೋಗುತ್ತಿತ್ತು. ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಹೋಗುತ್ತಾರೆ, ರಾಜ್ಯದ ಹಲವಾರು ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಾರೆ, ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಮನವಿ ಪತ್ರವನ್ನು ಕೊಡುತ್ತೇವೆ ಎನ್ನುವಂಥ ರೀತಿಯಲ್ಲಿ ಪ್ರಸ್ತಾಪ ಮಾಡಲಾಗಿದೆ. ಅದನ್ನು ಅಲ್ಲಗಳೆದಿದ್ದೇವಷ್ಟೆ. ಇವೊತ್ತು ಮತ್ತೊಂದು ಮಹತ್ವವಾದ ವಿಷಯವನ್ನು ಪ್ರಸ್ತಾಪ ಮಾಡಲು ನಾನು ಈಗ ಎದ್ದು ನಿಂತಿದ್ದೇನೆ. 9 ದಿವಸಗಳ ಕಾಲ ವಿಧಾನ ಪರಿಷತ್ತಿನಲ್ಲಿ ಕಾರ್ಯ ಕಲಾಪಗಳು ನಡೆದಿಲ್ಲ. ಪ್ರಕಾಶ್‌ರವರೇ ತಾವು ಕೇಳಬೇಕು, ಇದು ತಮಗೆ ಸಂಬಂಧ ಪಟ್ಟದ್ದು. ಪತ್ರಿಕೆಗಳಲ್ಲಿ ಏನು ಬರೆಯುತ್ತಾರೆಂದರೆ ವಿಧಾನ ಪರಿಷತ್ತಿನಲ್ಲಿ 9 ದಿವಸಗಳಿಂದಲೂ ಕಾರ್ಯ ಕಲಾಪಗಳು ನಡೆಯುತ್ತಿಲ್ಲ. ಮಾನ್ಯ ತಿಪ್ಪಣ್ಣನವರನ್ನು ವಿಧಾನ ಪರಿಷತ್ತಿನ ಸಭಾಪತಿಗಳೆಂದು ಒಪ್ಪುತ್ತಿಲ್ಲ. ಈ ರೀತಿ ಬಹಳಷ್ಟು ಮಾತುಗಳು ಪತ್ರಿಕೆಗಳಲ್ಲಿ ಬರುತ್ತಿವೆ. ಮೊನ್ನೆ ನಾನು ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಚರ್ಚೆ ಮಾಡಲು ಸಭೆ ಕರೆಯಿರಿ ಎಂದು ಹೇಳಿದೆ. ಸಭೆ ಕರೆದಿದ್ದರು. ನಾನು ಮತ್ತು ಮಾನ್ಯ ಖರ್ಗೆಯವರು ಇದ್ದರು. ಮಾನ್ಯ ಪ್ರಕಾಶ್‌ರವರೂ ಕೂಡ ಇದ್ದರು. ನಾನು ಸಭೆಯಲ್ಲಿ ಹೇಳಿದೆ, ಕಳೆದ 9 ದಿನಗಳಿಂದಲೂ ವಿಧಾನ ಪರಿಷತ್ತಿನಲ್ಲಿ ಕಾರ್ಯ ಕಲಾಪ ನಡೆಯುತ್ತಿಲ್ಲ, ಇವೊತ್ತು ಕೂಡ ನಡೆಯುತ್ತಿಲ್ಲ. ಕಾರ್ಯ ಕಲಾಪಗಳನ್ನು ಮಾನ್ಯ ತಿಪ್ಪಣ್ಣನವರು ನಡೆಸುವುದಕ್ಕೆ ಅಧಿಕಾರವನ್ನು ಹೊಂದಿಲ್ಲ. ಅವರು Panel of Chairmen